## 2

# ಯೇಸು: ಆತನ ಜೀವನದಲ್ಲಿ ಪ್ರವಾದನೆಯ ನೆರವೇರಿಕೆ

ಯೇಸುವು ಭವಿಷ್ಯದ ಘಟನೆಗಳನ್ನು ಮುಂತಿಳಿಸಲು ತನ್ನ ಸಾಮರ್ಥ್ಯವು ತಾನು ಕೇವಲ ಮಾನವನಾಗಿರುವದಷ್ಟೇ ಅಲ್ಲ, ದೇವರ ಕುಮಾರನಾಗಿರುವನು ಎಂಬ ನಿರ್ಣಾಯಕ ಪುರಾವೆಯಾಗಿರುವದೆಂದು ಯೋಚಿಸಿದನು: "ಅದು ನಡೆಯುವಾಗ ನನ್ನನ್ನೇ ಆತನೆಂದು ನೀವು ನಂಬುವಂತೆ ಅದು ನಡೆಯುವದಕ್ಕಿಂತ ಮುಂಚೆ ಅದನ್ನು ಇಂದಿನಿಂದ ನಿಮಗೆ ಹೇಳುತ್ತೇನೆ" (ಯೋಹಾನ 13:19). ಹಾಗೆಯೇ, ಬೈಬಲನ್ನು ಬರೆದ ದೇವರ ಎಲ್ಲಾ ಪ್ರವಾದಿಗಳಿಗೆ ಜನರು ತಮ್ಮ ಗಮನವನ್ನು ಕೊಟ್ಟರೆ, ಹಳೇ ಒಡಂಬಡಿಕೆಯ ಮುಂತಿಳಿಸುವಿಕೆಗಳು ದಿನವು ಉದಯವಾಗುವವರೆಗೆ ಹಾಗೂ ಪ್ರಾಥಃ ಕಾಲವು ಬರುವವರೆಗೆ ಕತ್ತಲೆಯಲ್ಲಿ ಪ್ರಕಾಶಿಸುವ ದೀಪಗಳಾಗಿರುವವೆಂದು ಭರವಸೆಯುಳ್ಳವರಾಗುವರು (ನೋಡಿರಿ 2 ಪೇತ್ರ 1:19). ಹಳೇ ಒಡಂಬಡಿಕೆಯ ಪ್ರವಾದಿಗಳು ತಮ್ಮ ಸಮಯದ ಜನರಿಗೆ ಮಾತ್ರವೇ ಅಲ್ಲ, ಆದರೆ ನಮಗೂ, ಈ ದಿನಕ್ಕೂ ಮಾತಾಡಿದರು (1 ಪೇತ್ರ 1:10-12).[1]

### ಕನ್ಯಕೆಯ ಕುಮಾರ (ಯೆಶಾಯ 7:14)

ಸಿರಿಯಾ ಮತ್ತು ಇಸ್ರಾಯೇಲಿನ ಉತ್ತರ ರಾಜ್ಯವು ಕ್ರಿ.ಪೂ. 735ರಲ್ಲಿ ಯೆಹೂದದ ದಕ್ಷಣ ರಾಜ್ಯಕ್ಕೆ ವಿರುದ್ಧವಾಗಿ ಮೈತ್ರಿಕೂಟ ರಚಿಸಿದವು. ಯೆಹೂದವು, "ಗಾಳಿಯಿಂದ ವನವೃಕ್ಷಗಳು ಅಲ್ಲಾಡುವಂತೆ" ನಡುಗಿತು (ಯೆಶಾಯ 7:2). ಯಾವಾಗಲೂ ದಯೆಯುಳ್ಳ ದೇವರು ಯೆಹೂದಿ ಆಹಾಜನನ್ನು ಆದರಿಸಲು ಯೆಶಾಯನನ್ನು ಕಳುಹಿಸಿದನು; ಆದರೆ ಆಹಾಜನು ದುಷ್ಟನೂ ಕಪಟಿಯೂ ಆಗಿದ್ದನು. ಆಹಾಜನಿಂದ ಅಕಾರಣವಾದ ಮತ್ತು ಕೀಳುಮಟ್ಟದ ಉತ್ತರವು ದೇವರ ದಯೆಯನ್ನು ತಿಳಿಸಿತು: ಆಹಾಜನೊಂದಿಗೆ ಆತನು "ಬೇಸರಗೊಂಡನು." ಸಿರಿಯಾ - ಎಫ್ರಾಯೀಮ್ಯರ ಒಳಸಂಚಿನಿಂದ ಆಹಾಜನನ್ನು ಬಿಡುಗಡೆ ಮಾಡುವೆನೆಂಬ ದೇವರಿಂದ ಒಂದು ಸಂಕೇತವನ್ನು ಅರಸನು ನಿರಾಕರಿಸಿದನು. ಅವನ ನಿರಾಕರಿಸುವಿಕೆಯ ಮೇಲೆ ದೇವರು ಕೋಪದಿಂದ ಹೇಗೂ ಆಹಾಜನಿಗೆ ಒಂದು ಸಂಕೇತ ಕೊಡುವೆನೆಂದು ಉತ್ತರ ಕೊಟ್ಟನು. ಆದರೆ ಆ ಸಂಕೇತವು ಅವನಿಗೆ ಮೆಚ್ಚಿಕೆಯಾದದ್ದಾಗಿರುವದಿಲ್ಲ:

> ಆದುದರಿಂದ ಕರ್ತನು ತಾನೇ ನಿಮಗೆ ಒಂದು ಗುರುತನ್ನು ಕೊಡುವನು: ಇಗೋ, ಒಬ್ಬ ಕನ್ಯಕೆಯು ಗರ್ಭಿಣಿಯಾಗಿ ಮಗುವನ್ನು ಹೆತ್ತು, ಅವನಿಗೆ ಇಮ್ಮಾನುವೇಲ್ ಎಂದು ಹೆಸರಿಡುವಳು (ಯೆಶಾಯ 7:14).

ಆಹಾಜನಿಗೆ ತಿಳಿದ ಒಬ್ಬ ಪ್ರಾಮುಖ್ಯ ಯುವತಿಯು ಬೇಗನೇ ಮದುವೆಯಾಗುವಳು ಹಾಗೂ ಒಂದು ಗಂಡು ಮಗುವನ್ನು ಹೆರುವಳು ಮತ್ತು ಅದಕ್ಕೆ ಅಸಾಮಾನ್ಯವಾದ ಹೆಸರು ಕೊಡಲ್ಪಡುವು: ಇಮ್ಮಾನುವೇಲ್, ಅದರ ಅರ್ಥ "ದೇವರು ನಮ್ಮೊಂದಿಗೆ ಇದ್ದಾನೆ" ಎಂಬುದು. ಆ ಮಗುವು ಬೆಳೆಯುವ ಮೊದಲು, ಎರಡು ದೇಹದ ಭಯಪಡಿಸುವಿಕೆಯು ಇಲ್ಲವಾಗಿ ಹೋಗುವುದು. ಹಾಗಿದ್ದರೂ, ದೇವರು ಮಧ್ಯದಲ್ಲಿ ಇನ್ನೊಂದನ್ನು ಕೂಡಿಸಿ ಹೇಳಿದನು: ಇಸ್ರಾಯೇಲ ಮತ್ತು ಸಿರಿಯವು ಯೆಹೂದಕ್ಕೆ ಇನ್ನು ಮುಂದೆ ಗಂಡಾರವನ್ನೊಡ್ಡದಿದ್ದರೂ ಅಶ್ಯೂರವು ಗಂಡಾಂತರವನ್ನು ತರುವುದು. ಯೆಹೂದ್ಯರು ಆಹಾರವಿಲ್ಲದವರಾಗುವಷ್ಟರ ಮಟ್ಟಿಗೆ ಅಶ್ಯೂರವು ಯುದಾಯದ ಮೇಲೆ ಮುತ್ತಿಗೆ ಹಾಕುವುದು. ಪ್ರವಾದಿಗನುಗುಣವಾಗಿ, ಒಬ್ಬ ಮನುಷ್ಯನು ಒಂದು ಆಕಳನ್ನು ಮತ್ತು ಎರಡು ಕುರಿಗಳನ್ನು ಜೀವದಿಂದ ಇಡಲು ಶಕ್ತನಾಗಬಹುದು (ಯೆಶಾಯ 7:21, 22). ಆದುದರಿಂದ ಹಾಲು ಲಭ್ಯವಿರುವುದು ಮತ್ತು ದೇಶದಲ್ಲಿ ಉಳಿಸಲ್ಪಡುವ ಜನರು ಮೊಸರನ್ನೂ ಜೇನುತುಪ್ಪವನ್ನೂ ತಿನ್ನುವರು.

ಆಗ, ಪ್ರವಾದನೆಯ ಮಗುವಿಗೆ ಆಹಾರಕ್ಕಾಗಿ ಮೊಸರು ಮತ್ತು ಜೇನು ತುಪ್ಪವಿರುವುದು (ಯೆಶಾಯ 7:15). ಇಮ್ಮಾನುವೇಲ್, "ದೇವರು ನಮ್ಮೊಂದಿಗೆ ಇದ್ದಾನೆ" ಎಂಬುದು ಬಾಲಕನ ಹೆಸರಾಗಿರುವುದು. ಜನಾಂಗವನ್ನು ದಂಡಿಸಲು ಯೆಹೂದದೊಂದಿಗೆ ದೇವರ ಇರುವಿಕೆಯ ಸಂಕೇತವಾಗಿರುವುದು. ದೇವರು ತನ್ನ ಜನಾಂಗದೊಂದಿಗೆ ಎರಡು ವಿಧದಲ್ಲಿ ಇರಬಹುದು. ದೇವರು ಯೆಹೂದದೊಂದಿಗೆ, ಇರಬಹುದು. ಆದರೆ ಆಶೀರ್ವದಿಸುವದಕ್ಕಾಗಿ ಅಲ್ಲ; ಶಿಕ್ಷಿಸುವದಕ್ಕಾಗಿ ಆತನು ಯೆಹೂದದೊಂದಿಗೆ ಇರಬಹುದು. ಆಹಾಜನು ಮತ್ತು ಅವನ ಜನರು ಅಪನಂಬಿಗಸ್ತರಾಗಿದ್ದರು ಹಾಗೂ ದೇವರ ವಾಕ್ಯವು ನಿಶ್ಚಿತವಾದದ್ದಾಗಿತ್ತು.

ಅದು ಯೆಶಾಯ 7:14ರ ಅಲ್ಪಾವಧಿ ಅರ್ಥವಾಗಿತ್ತು. ಆದರೆ ಸ್ಥಳಿಕದ್ದಕ್ಕಿಂತ ಹೆಚ್ಚು ದೊಡ್ಡದಾದದ್ದು, ಕ್ರಿ.ಪೂ. ಎಂಟನೆಯ ಶತಮಾನದಲ್ಲಿ ಪ್ರವಾದಿಕ ಭಾಷೆಯಲ್ಲಿ ಆಹಾಜನಿಗೆ ಸಂಕೇತವು ಕೊಡಲ್ಪಟ್ಟಿತು. ಆಹಾಜನು ಜೀವಿಸುತ್ತಿದ್ದಾಗ ಅಲ್ಪಾವಧಿ ನೆರವೇರುವಿಕೆಗೆ ಯೆಶಾಯನು ಸೂಚಿಸಿದ್ದಲ್ಲದೇ, ಮರಿಯಳು ಮತ್ತು ಯೋಸೇಫ ಅವರ ದಿನಗಳಲ್ಲಿ ದೀರ್ಘಕಾಲದ ನೆರವೇರುವಿಕೆಯನ್ನು ತೋರಿಸಿದನು. ಬಹಳ ಸಲ, ನೇರವಾದ ಮತ್ತು ನೇರವಲ್ಲದ ಅನ್ವಯಗಳೂ ಪ್ರಾಥಮಿಕವಾದ ಹಾಗೂ ದ್ವಿತೀಯವಾದ ಅರ್ಥಗಳೂ ಮುಂತಿಳಿಸುವಿಕೆಗಳಿಗೆ ಇದ್ದವು. ಮರಿಯಳ ಗರ್ಭದಲ್ಲಿ ಮಗುವಿರುವುದು ವ್ಯಭಿಚಾರದಿಂದ ಅಲ್ಲ, ಆದರೆ ದೇವರ ಉದ್ದೇಶದ ಕಾರಣದಿಂದ, ಯೆಶಾಯನ ಪ್ರಾವಾದನೆಯೊಂದಿಗೆ ಅನುಸಾರವಾಗಿ ಇತ್ತೆಂದು ದೇವರ ದೂತನು ಪ್ರಕಟಿಸಿದನು (ಮತ್ತಾಯ 1:23).

ಕ್ರಿ.ಪೂ. ಎಂಟನೆಯ ಶತಮಾನದಲ್ಲಿ ಮತ್ತು ಕ್ರಿ.ಶ. ಮೊದಲನೆಯ ಶತಮಾನದಲ್ಲಿ ಯೆಶಾಯ 7:14ರ ನೆರವೇರುವಿಕೆಯಲ್ಲಿ ಭಿನ್ನತೆಗಳಿರುತ್ತವೆ. ಆದಾಗ್ಯೂ ಮೊದಲನೆ ಯದನ್ನು ಅನಂತರದ್ದನ್ನು ಮುಂತಿಳಿಸುವದಕ್ಕೆ ಅಸ್ತಿವಾರವಾಗಿ ಪರಿಶುದ್ಧಾತ್ಮನು ಉಪಯೋಗಿಸಿದಷ್ಟು ಹೋಲಿಕೆಗಳಿದ್ದವು, *Almah* ಎಂಬ ಪದವು ಅದರ ವಿಶಾಲವಾದ ಅರ್ಥದಲ್ಲಿ ("ಯುವತಿ") ಕ್ರಿ.ಪೂ. ಎಂಟನೆಯ ಶತಮಾನದಲ್ಲಿ ಕನ್ಯಕೆಯಿಂದ ಜನನದ ಅವಶ್ಯಕತೆಯನ್ನು ಹೊಂದಿರಲಿಲ್ಲ. ಹಾಗೂ ಯಾವುದೂ ದಾಖಲೆಯಲ್ಲಿ ಇರುವದಿಲ್ಲ. ಹಾಗಿದ್ದರೂ ಕ್ರಿ.ಶ. ಮೊದಲನೆಯ ಶತಮಾನದಲ್ಲಿ ವಿಶಿಷ್ಟವಾದ ಮಾದರಿಯ ಯುವತಿಯು (ಕನ್ನಿಕೆ; ಗ್ರೀಕ: *parthenos;* ಮತ್ತಾಯ 1:23) ತಾನಿನ್ನೂ ಕನ್ಯಕೆಯಾಗಿರುವಾಗಲೇ ತಾಯಿಯಾದಳು.

ಆಹಾಜನ ದಿನದಲ್ಲಿ ಜನಿಸಿದ ಬಾಲಕನು ಹೆಸರಿನಲ್ಲಿ ಮಾತ್ರವೇ ಇಮ್ಮಾನುವೇಲ್

“ದೇವರು ನಮ್ಮೊಂದಿಗೆ ಇದ್ದಾನೆ” ಆಗಿದ್ದನು; ನಿಜವಾಗಿಯೂ ದೇವರಾಗಿರಲಿಲ್ಲ. ವಿರೋಧವಾಗಿ, ಮರಿಯಳ ದಿನದಲ್ಲಿ ಜನಿಸಿದ ಬಾಲಕನಿಗೆ ಇಮ್ಮಾನುವೇಲ್, “ದೇವರು ನಮ್ಮೊಂದಿಗೆ ಇದ್ದಾನೆ” ಎಂಬ ಹೆಸರು ಕೊಡಲ್ಪಟ್ಟಿತು; ಯಾಕಂದರೆ ಆತನು ನಿಜ ವಾಗಿಯೂ ದೇವರಾಗಿದ್ದನು ಆಹಾಜನ ದಿನದಲ್ಲಿಯ ಮಗುವು ತನ್ನ ಹೆಸರಿನಿಂದ ಮಾತ್ರವೇ ಸಂಕೇತವಾಗಿದ್ದನು; ಮರಿಯಳ ಕುಮಾರನು ಹೆಸರಿನಿಂದ ಮತ್ತು ಸತ್ಯದಿಂದ ಎರಡರಿಂದಲೂ ಸಂಕೇತವಾಗಿದ್ದನು.

ಆಹಾಜನ ದಿನದಲ್ಲಿ ಪ್ರವಾದಿಸಲ್ಪಟ್ಟ ಮಗುವು ಯೆಹೂದದೊಂದಿಗೆ ದೇವರು ಇರುವನು ಎಂಬುದಕ್ಕೆ ಸಂಕೇತವಾಗಿತ್ತು. ಮರಿಯಳ ದಿನದಲ್ಲಿ ಪ್ರವಾದಿಸಲ್ಪಟ್ಟ ಮಗುವು ದೇವರು ಇಡೀ ಜಗತ್ತಿನೊಂದಿಗೆ ಇರುವನೆಂಬುದಕ್ಕೆ ಸಂಕೇತವಾಗಿತ್ತು (ಯೋಹಾನ 3:16; 1 ಯೋಹಾನ 2:2). ಆಹಾಜನ ದಿನದಲ್ಲಿಯ ಸಂಕೇತವು ಜನರನ್ನು ಶಿಕ್ಷಿಸಲು ದೇವರು ಅವರೊಂದಿಗಿರುವನು ಎಂಬುದರ ಎಚ್ಚರಿಕೆಯಾಗಿತ್ತು. ಮರಿಯಳ ದಿನದಲ್ಲಿಯ ಸಂಕೇತವು ಜನರನ್ನು ಆಶೀರ್ವದಿಸಲು ದೇವರು ಅವರೊಂದಿಗಿರುವನೆಂಬ ಶುಭವಾರ್ತೆ ಯಾಗಿತ್ತು.

ಮರಿಯಳ ಮಗುವು ಕನ್ಯಕೆಯಿಂದ ಜನನ ಹೊಂದಿರದಿದ್ದರೆ, ಆತನು ಸತ್ಯದಲ್ಲಿ ಇಮ್ಮಾನುವೇಲ್, “ದೇವರು ನಮ್ಮೊಂದಿಗೆ ಇದ್ದಾನೆ” ಆಗಿರುತ್ತಿರಲಿಲ್ಲ, ಯಾಕಂದರೆ ಆತನು ಉಳಿದ ನಮ್ಮ ಹಾಗೆ ಎಲ್ಲರಂತೆ ಪೂರ್ಣ ಮಾನವನಾಗಿರುತ್ತಿದ್ದನು ಹಾಗೂ ದೇವ - ಮಾನವನಾಗಿರುತ್ತಿರಲಿಲ್ಲ. ಅದಲ್ಲದೆ, ಅವನು ಹಾದರದಿಂದ ಹುಟ್ಟಿದ, ಅಕ್ರಮವಾದ ಮಗುವಾಗಿರುತ್ತಿದ್ದನು. ಇದು ಸತ್ಯವಾಗಿದ್ದರೆ, ಆಗ ಯೇಸುವು ದೈವಿಕನಾಗಿರುತ್ತಿರಲಿಲ್ಲ, ಮತ್ತು ಆತನ ಧರ್ಮವು ಠಕ್ಕತನದ್ದಾಗಿರುತ್ತಿತ್ತು, ಅಂಥ ರೀತಿಯಲ್ಲಿ, ಇಮ್ಮಾನುವೇಲ್, “ದೇವರು ನಮ್ಮೊಂದಿಗಿದ್ದಾನೆ” ಎಂಬ ಹೆಸರು ಹಾಸ್ಯಕರವಾದದ್ದಾಗುತ್ತಿತ್ತು.

## ಅಬ್ರಹಾಮನ ಸಂತತಿ (ಆದಿಕಾಂಡ 22:18)

ಅಬ್ರಹಾಮನು ಜಗತ್ತಿಗೆ ಆಶೀರ್ವಾದ ನಿಧಿಯಾಗಿರುವನೆಂದು ಯೆಹೋವನು ಮುಂತಿಳಿಸಿದನು. ಆದಿಕಾಂಡ 12:3ರಲ್ಲಿಯ “in you” ಎಂಬ ಮಾತುಗಳಲ್ಲದೇ, ಹಿಂದಿನ ವಚನದಲ್ಲಿ “in your seed” ಎಂಬ ಮಾತುಗಳನ್ನು ಉಪಯೋಗಿಸಿದನು. ಆದಿಕಾಂಡ 22:17ರಲ್ಲಿ “ಸಂತತಿ” ಎಂಬ ಪದವು ಅಬ್ರಹಾಮನ ಸಂತತಿಯ ಬಗ್ಗೆ (ಅಂದರೆ, ಇಸ್ರಾಯೇಲಿನ ಇಡೀ ಜನಾಂಗಕ್ಕೆ) ಉಪಯೋಗಿಸಲ್ಪಟ್ಟಿದ್ದರೂ ಆದಿಕಾಂಡ 22:18ರಲ್ಲಿ ಅದೇ ರೀತಿಯಲ್ಲಿ ಉಪಯೋಗಿಸಲ್ಪಟ್ಟಿರುವದಿಲ್ಲ. ವಚನ 18ರಲ್ಲಿ “ಸಂತತಿ” ಎಂಬ ಪದವು ಅಬ್ರಹಾಮನ ವಂಶಜರಲ್ಲಿ ಒಬ್ಬಾತನ ಬಗ್ಗೆ, ಅಂದರೆ ಯೇಸುವಿನ ಬಗ್ಗೆ ಸ್ಪಷ್ಟವಾದ ಮುಂತಿಳಿಸುವಿಕೆಗೆ ಮಿತಿಗೊಂಡಿದೆ. ಗಲಾತ್ಯ 3:16ರಲ್ಲಿ, “... [ದೇವರು] ನಿನ್ನ ಸಂತತಿಗಳಿಗೆ ಎಂದು ಹೇಳಿ ಅನೇಕರನ್ನು ಸೂಚಿಸದೆ ನಿನ್ನ ಸಂತತಿಗೆ ಎಂದು ಹೇಳಿ ಒಬ್ಬನನ್ನೇ ಸೂಚಿಸುತ್ತಾನೆ. ಆ ಒಬ್ಬನು ಕ್ರಿಸ್ತನೇ” ಎಂದು ಹೇಳಿದಾಗ ಪೌಲನು ಆ ವಚನವನ್ನು ಉಲ್ಲೇಖಿಸಿದನು. ಪ್ರೇರಿತನಾದ ಹೊಸ ಒಡಂಬಡಿಕೆಯ ಬರಹಗಾರನು ಹೀಗೆ ಹಳೇ ಒಡಂಬಡಿಕೆಯ ಮುಂತಿಳಿಸುವಿಕೆಗೆ ಸ್ಪಷ್ಟವಾದ ಹೊಳೆಯುವ ಅರ್ಥವನ್ನು ಕೊಟ್ಟನು.

ಇನ್ನೊಬ್ಬ ಹೊಸ ಒಡಂಬಡಿಕೆಯ ಭಾಷಣಕಾರನು ಆದಿಕಾಂಡ 22:18ರ ಮೆಸ್ಸೀಯನ ಮಹತ್ವವನ್ನು ತೋರಿಸಿದನು. ಯೆರೂಸಲೇಮ ದೇವಾಲಯದ ಸೊಲೊಮೋನನ ದ್ವಾರದ ಬಳಿಯಲ್ಲಿ ಪೇತ್ರನು ಹೀಗೆ ಹೇಳಿದನು: “ನೀವು ಪ್ರವಾದಿಗಳ

ಶಿಷ್ಯರೂ ದೇವರು ನಮ್ಮ ಪಿತೃಗಳ ಸಂಗಡ ಮಾಡಿಕೊಂಡ ಒಡಂಬಡಿಕೆಗೆ ಬಾಧ್ಯರೂ ಆಗಿದ್ದೀರಿ. ಆತನು ಅಬ್ರಹಾಮನಿಗೆ - ನಿನ್ನ ಸಂತತಿಯ ಮೂಲಕ ಭೂಲೋಕದ ಎಲ್ಲಾ ಕುಟುಂಬಗಳಿಗೆ ಅಶೀರ್ವಾದವುಂಟಾಗುವುದು ಎಂದು ಹೇಳಿ ಆ ಒಡಂಬಡಿಕೆಯನ್ನು ಮಾಡಿಕೊಂಡನಲ್ಲಾ" (ಅಪೊಸ್ತಲರ ಕೃತ್ಯ 3:25).

## ಗಲಿಲಾಯದ ಸೇವಕ (ಯೆಶಾಯ 9:1, 2)

ಮೆಸ್ಸೀಯನ ಬಗೆಗಿನ ಅನೇಕ ಹಳೇ ಒಡಂಬಡಿಕೆಯ ಮುಂತಿಳಿಸುವಿಕೆಗಳಿಗೆ ಹೆಚ್ಚು ತಕ್ಷಣದ, ಸ್ಥಳಿಕ ಅರ್ಥವಿತ್ತು, ಹಾಗಿದ್ದರೂ ಕೆಲವುಗಳಿಗೆ ಯಾವುದೇ ಹಳೇ ಒಡಂಬಡಿಕೆಯ ಅರ್ಥವಿಲ್ಲದಿರುವಂತೆ ತೋರುತ್ತದೆ. ಅನಂತರದ ಮಾದರಿಗಳಲ್ಲಿ ಒಂದು ಕ್ರಿ.ಪೂ. ಎಂಟನೆಯ ಶತಮಾನದಲ್ಲಿ "ಸುವಾರ್ತಾ ಪ್ರವಾದಿ" ಯೆಶಾಯನಿಂದ ಬರೆಯಲ್ಪಟ್ಟಿತು:

> ಆದರೆ ಸಂಕಟಪಟ್ಟು ದೇಶಕ್ಕೆ ಅಂಧಕಾರವಿನ್ನಿಲ್ಲ ಪೂರ್ವಕಾಲದಲ್ಲಿ ಜೆಬುಲೋನ್ ಮತ್ತು ನಫ್ತಾಲಿ ಸೀಮೆಗಳನ್ನು ಆತನು ಅವಮಾನಕ್ಕೆ ಗುರಿಮಾಡಿದನು; ಅನಂತರದಲ್ಲಿ ಯೊರ್ದನಿನ ಆಚೆಯ ಸೀಮೆ, ಸಮುದ್ರದ ಕಡೆಗಿರುವ ಸೀಮೆ, ಅನ್ಯಜನಗಳಿರುವ ಗಲಿಲಾಯ ಸೀಮೆ ಈ ಪ್ರಾಂತವನ್ನೆಲ್ಲಾ ಘನಪಡಿಸಿದ್ದಾನೆ.
>
> ಕತ್ತಲಲ್ಲಿ ಸಂಚರಿಸಿದ ಜನರಿಗೆ ದೊಡ್ಡ ಬೆಳಕು ಕಾಣಿಸಿತು; ಕಾರ್ಗತ್ತಲಾದ ದೇಶದಲ್ಲಿದ್ದವರಿಗೆ ಪ್ರಕಾಶವು ಹೊಳೆಯಿತು (ಯೆಶಾಯ 9:1, 2).

ಗಲಿಲಾಯ ಸೀಮೆಯು "ಅನಂತರದಲ್ಲಿ" ಮಹಿಮೆಯ ಸ್ಥಾನವನ್ನು ತಲುಪುವುದು ಮತ್ತು ಸದಾಕಾಲಕ್ಕೂ ಪ್ರಸಿದ್ಧಿ ಹೊಂದುವುದು. ಸಹಜವಾಗಿ, ಯೇಸುವು ತಾನು ಪರಲೋಕವನ್ನು ಬಿಡುವ ಮೊದಲು ತನ್ನ ಭೂಲೋಕದ ಸೇವೆಯ ಹೆಚ್ಚಿನ ಬಾಗವನ್ನು ಗಲಿಲಾಯದಲ್ಲಿ ಕಳೆಯಲು ಯೋಜಿಸಿದ್ದನು:

> ಯೋಹಾನನು ಸೆರೆಗೆ ಬಿದ್ದನೆಂದು ಯೇಸು ಕೇಳಿ ಆ ಸ್ಥಳವನ್ನು ಬಿಟ್ಟು ಗಲಿಲಾಯ ಸೀಮೆಗೆ ಹೊರಟು ಹೋದನು. ಬಳಿಕ ನಜರೇತೆಂಬ ಊರನ್ನು ಬಿಟ್ಟು ಜೆಬುಲೋನ್ ನೆಫ್ತಲೀಮ್ ಎಂಬ ನಾಡುಗಳಿಗೆ ಬಂದು ಸಮುದ್ರದ ಹತ್ತಿರದಲ್ಲಿರುವ ಕಪೆರ್ನೌಮ ಎಂಬ ಊರಿನಲ್ಲಿ ಮನೆಮಾಡಿಕೊಂಡು ಇದ್ದನು, ಇದರಿಂದ ಯೆಶಾಯನೆಂಬ ಪ್ರವಾದಿಯ ಮುಖಾಂತರ ಹೇಳಿಸಿರುವ ಮಾತು ನೆರವೇರಿತು; ಆ ಮಾತು ಏನೆಂದರೆ:
>
> "ಜೆಬುಲೋನ್ ಸೀಮೆ ಮತ್ತು ನೆಫ್ತಲೀಮ್ ಸೀಮೆ,
> ಯೊರ್ದನಿನ ಆಚೆ, ಸಮುದ್ರದ ಕಡೆಗಿರುವ ಸೀಮೆ,
> ಅನ್ಯಜನಗಳಿರುವ ಗಲಿಲಾಯ ಸೀಮೆ, ಕತ್ತಲಲ್ಲಿ ವಾಸಿಸಿದ ಈ ಸೀಮೆಗಳ ಜನರಿಗೆ ದೊಡ್ಡ ಬೆಳಕು ಕಾಣಿಸಿತು;
> ಕಾರ್ಗತ್ತಲಾದ ದೇಶದಲ್ಲಿದ್ದವರಿಗೆ ಸೂರ್ಯೋದಯವಾಯಿತು"
> (ಮತ್ತಾಯ 4:12-16).

## ಅಭಿಷಿಕ್ತ ಪ್ರಸಂಗಿ (ಯೆಶಾಯ 61:1-3)

ಒಬ್ಬ ಅಭಿಷಿಕ್ತ ಪ್ರಸಂಗಿಯು ಕ್ರಿ.ಪೂ. ಎಂಟನೆಯ ಶತಮಾನದಲ್ಲಿ ಯೆಶಾಯ ಸುರುಳಿಯ ಮುಖಾಂತರ ಪ್ರವಾದಿಕವಾಗಿ ಮಾತಾಡಿದನು.

> ಕರ್ತನಾದ ಯೆಹೋವನ ಆತ್ಮವು ನನ್ನ ಮೇಲೆ ಅದೆ,
> ಆತನು ನನ್ನನ್ನು ಬಡವರಿಗೆ ಶುಭವರ್ತಮಾನವನ್ನು
> ಸಾರುವದಕ್ಕೆ ಅಭಿಷೇಕಿಸಿದನು;
> ಮನಮುರಿದವರನ್ನು ಕಟ್ಟಿ ವಾಸಿ ಮಾಡುವದಕ್ಕೂ
> ಸೆರೆಯವರಿಗೆ ಬಿಡುಗಡೆಯಾಗುವದನ್ನು,
> ಬಂಧಿಗಳಿಗೆ [ಕದ] ತೆರೆಯುವದನ್ನು;
> ಪ್ರಸಿದ್ಧಿ ಪಡಿಸುವದಕ್ಕೂ ಯೆಹೋವನು ನೇಮಿಸಿರುವ ಶುಭವರುಷ,
> ನಮ್ಮ ದೇವರು ಮುಯ್ಯಿ ತೀರಿಸುವ ದಿನ,
> ಇವುಗಳನ್ನು ಪ್ರಚುರಗೊಳಿಸುವದಕ್ಕೂ
> ದುಃಖಿತರೆಲ್ಲರನ್ನು ಸಂತೈಸುವದಕ್ಕೂ
> ಚೀಯೋನಿನಲ್ಲಿ ಶೋಕಿಸುವವರಿಗೆ
> ಬೂದಿಗೆ ಬದಲಾಗಿ ಶಿರೋಭೂಷಣ,
> ದುಃಖವಿದ್ದಲ್ಲಿ ಆನಂದ ತೈಲ,
> ಕುಂದಿದ ಮನಕ್ಕೆ ಪ್ರತಿಯಾಗಿ ಉತ್ಸಾಹ ಸ್ತೋತ್ರದ ವಸ್ತ್ರ
> ಇವುಗಳನ್ನು ಒದಗಿಸಿಕೊಡುವದಕ್ಕೂ ಆತನು ನನ್ನನ್ನು ಕಳುಹಿಸಿದ್ದಾನೆ
> ಯೆಹೋವನು ತನ್ನ ಪ್ರಭಾವಕ್ಕೋಸ್ಕರ ಹಾಕಿದ ನೀತಿ ವೃಕ್ಷಗಳು ಎಂಬ ಬಿರುದು
> ಇವರಿಗಾಗುವದು (ಯೆಶಾಯ 61:1-3).

ಕ್ರಿ.ಶ. ಮೊದಲನೆಯ ಶತಮಾನದಲ್ಲಿ ಮೂವತ್ತು ವರ್ಷಪ್ರಾಯದ ವಿದ್ಯೆಕಲಿಯದ ಬಡಿಗನು ಸಭಾಮಂದಿರದಲ್ಲಿಯ ಬೋಧಕರನ್ನು ಆಶ್ಚರ್ಯಗೊಳಿಸಿದನು:

> ಹೀಗಿರಲಾಗಿ ಆತನು (ಯೇಸುವು) ತಾನು ಬೆಳೆದ ನಜರೇತಿಗೆ ಬಂದು ತನ್ನ ವಾಡಿಕೆಯ ಪ್ರಕಾರ ಸಬ್ಬತ್ ದಿನದಲ್ಲಿ ಸಭಾ ಮಂದಿರಕ್ಕೆ ಹೋಗಿ ಓದುವದಕ್ಕಾಗಿ ಎದ್ದು ನಿಂತನು. ಆಗ ಯೆಶಾಯನೆಂಬ ಪ್ರವಾದಿಯ ಗ್ರಂಥದ ಸುರುಳಿಯನ್ನು ಆತನ ಕೈಗೆ ಕೊಡಲಾಗಿ ಆತನು ಆ ಸುರುಳಿಯನ್ನು ಬಿಚ್ಚಿ ಮುಂದೆ ಹೇಳುವ ಮಾತು ಬರೆದಿರುವ ಸ್ಥಳವನ್ನು ಕಂಡು ಓದಿದನು; ಆ ಮಾತೇನಂದರೆ,
>
> "ಕರ್ತನ ಆತ್ಮವು ನನ್ನ ಮೇಲೆ ಅದೆ, ಆತನು ನನ್ನನ್ನು ಬಡವರಿಗೆ ಶುಭವರ್ತಮಾನವನ್ನು ಸಾರುವದಕ್ಕೆ ಅಭಿಷೇಕಿಸಿದನು ..." (ಲೂಕ 4:16-18).

ಆತನು ಸುಂದರವಾದ ಮುಂತಿಳಿಸುವ ಪ್ರವಾದನೆಯನ್ನು ಮುಂದರಿಸಿದನು, ಪುಸ್ತಕವನ್ನು ಮುಚ್ಚಿಟ್ಟನು, ಮತ್ತು ಧೈರ್ಯದಿಂದ, "ಈ ಹೊತ್ತು ನೀವು ನನ್ನ ಮಾತನ್ನು ಕೇಳುವಲ್ಲಿ ಈ ದೇವೋಕ್ತಿ ನೆರವೇರಿದೆ" ಎಂದು ಪ್ರಕಟಿಸಿದನು (ಲೂಕ 4:21).

ಯೇಸುವಲ್ಲದೇ ಬೇರೆ ಯಾರಿಗಾದರೂ ಅಂಥ ಹೇಳಿಕೆ ಕೊಡುವುದು ಗಂಭೀರವಾದ ಯೋಚನೆಯನ್ನು ದಾಟಿ ಇರುವುದು. ಯೇಸುವಿಗೆ, ಅಂಥ ಹೇಳಿಕೆ ಕೊಡುವುದು ಸ್ವಾಭಾವಿಕವಾದದ್ದೂ ಯೋಗ್ಯವಾದದ್ದೂ ಆಗಿತ್ತು.

## ಮೋಶೆಯಂಥ ಪ್ರವಾದಿ (ಧರ್ಮೋಪದೇಶಕಾಂಡ 18:15)

ಸಿನಾಯಿ ಬೆಟ್ಟದ ಬಳಿಯಲ್ಲಿ ಪರ್ವತವು ನಡುಗಿದಾಗ ಇಸ್ರಾಯೇಲ್ಯರು ನಡುಗಿದರು. ಬೆಟ್ಟದ ಮೇಲೆ ಬೆಂಕಿಯೂ ಗುಡುಗೂ ಮಿಂಚೂ ದಟ್ಟವಾದ ಮೊಡವೂ ಮುಸುಕಿತು ಹಾಗೂ ಇಡೀ ಪರ್ವತವು ಆವಿಗೆಯ ಹೊಗೆಯಿಂದ ಆವರಿಸಿಕೊಂಡಿತು (ವಿಮೋಚನ ಕಾಂಡ 19:16-18; 20:18). ದೇವರು ಧ್ವನಿಯು ದಶಾಜ್ಞೆಗಳನ್ನು ಹೇಳಿದಾಗ ಅವರು ನಡುಗಿದರು. ಭಯಪಟ್ಟ ಜನರು ದೇವರ ಸನ್ನಿಧಿಯಲ್ಲಿ ಅಷ್ಟು ಸಮೀಪವಿದ್ದು ಸತ್ತು ಹೋಗದಂತೆ ಮೋಶೆಯೇ ಮಾತಾಡಬೇಕೆಂದು ಬೇಡಿಕೊಂಡರು. ಮೋಶೆ ಕರ್ತನೊಂದಿಗೆ ಮಾತಾಡಿದನು ಮತ್ತು ಮೋಶೆಯಂಥ ದೈವಿಕ ಮಧ್ಯಸ್ಥಗಾರನಂತೆ ಇನ್ನೊಬ್ಬ ಪ್ರತಿನಿಧಿಯನ್ನು ಕಳುಹಿಸುವ ದೇವರ ವಾಗ್ದಾನವನ್ನು ಅವನು ಅವರಿಗೆ ಹೇಳಿದನು:

> ನಿಮ್ಮ ದೇವರಾದ ಯೆಹೋವನು ನಿಮ್ಮ ಸಹೋದರರಲ್ಲಿ ನನ್ನಂಥ ಪ್ರವಾದಿಯನ್ನು [ನಿಮಗೆ] ಏರ್ಪಡಿಸುವನು; ಅವನಿಗೇ ನೀವು ಕಿವಿಗೊಡಬೇಕು; ಹೋರೇಬಿನಲ್ಲಿ ನೀವು ಸಭೆಕೂಡಿದ ದಿನದಲ್ಲಿ ಹಾಗೆಯೇ ಕೋರಿಕೊಂಡು - ನಮ್ಮ ದೇವರಾದ ಯೆಹೋವನ ಸ್ವರವನ್ನು ಇನ್ನು ಕೇಳಲೂ ಈ ಘೋರವಾದ ಅಗ್ನಿಜ್ವಾಲೆಯನ್ನು ಇನ್ನು ನೋಡಲು ನಮಗೆ ಮನಸ್ಸಿಲ್ಲ; ಕೇಳಿ ನೋಡಿದರೆ ಸತ್ತೇವು ಎಂದು ನೀವು ಹೇಳಿದಿರಷ್ಟೇ (ಧರ್ಮೋಪದೇಶಕಾಂಡ 18:15, 16).

ಮಧ್ಯಸ್ಥನಾಗಿ ವಕ್ತಾರನು ಬೇಕೆಂಬ ಜನರ ಬಿನ್ನಹವು ಕೇವಲ ಬೇಡಿಕೆಯಾಗಿದೆಯೆಂದು ದೇವರು ಯೋಚಿಸಿದನು. ಆತನು ಮೋಶೆಗೆ, "ಇವರು ಹೇಳಿದ ಮಾತು ಒಳ್ಳೆಯದು" (ಧರ್ಮೋಪದೇಶಕಾಂಡ 18:17) ಎಂದು ಹೇಳಿದನು ಮತ್ತು ಆತನು ವಾಗ್ದಾನವನ್ನು ಪುನಃ ಹೇಳಿದನು:

> ಇವರ ಸ್ವದೇಶದವರಲ್ಲಿ ನಿನ್ನಂಥ ಪ್ರವಾದಿಯನ್ನು ಅವರಿಗೋಸ್ಕರ ಏರ್ಪಡಿಸುವೆನು; ಅವನ ಬಾಯಿಂದ ನನ್ನ ಮಾತುಗಳನ್ನು ನುಡಿಸುವೆನು; ನಾನು ಅವನಿಗೆ ಆಜ್ಞಾಪಿಸಿದ್ದನೆಲ್ಲಾ ಅವನು ಅವರಿಗೆ ತಿಳಿಸುವನು. ಅವನು ನನ್ನ ಹೆಸರಿನಲ್ಲಿ ಹೇಳಿದ ಮಾತುಗಳಿಗೆ ಯಾರು ಕಿವಿಕೊಡುವದಿಲ್ಲವೋ ಅಂಥವರನ್ನು ನಾನು ಶಿಕ್ಷಿಸುವೆನು (ಧರ್ಮೋಪದೇಶಕಾಂಡ 18:18, 19).

ಅನಂತರ ಮೋಶೆಯಂಥ ಪ್ರವಾದಿಯು ಬರುವನು ಮೋಶೆಯು ಸಾಮಾನ್ಯವಾದ ಪ್ರವಾದಿಯಾಗಿರಲಿಲ್ಲ ಎಂಬುದೇನೋ ನಿಜ. "ದೇವರು ಅವನ ಸಂಗಡ ಗೂಢವಾಗಿ ಅಲ್ಲ, ಪ್ರತ್ಯಕ್ಷದಲ್ಲಿ ಸ್ಪಷ್ಟವಾಗಿಯೇ ಮಾತಾಡಿದನು. ಅವನು ಯೆಹೋವನ ಸ್ವರೂಪವನ್ನೆ ದೃಷ್ಟಿಸುವನು" (ಅರಣ್ಯಕಾಂಡ 12:8). "ಕರ್ತನು ಮುಖಾಮುಖಿಯಾಗಿ ತಿಳಿದಿದ್ದ" (ಧರ್ಮೋಪದೇಶಕಾಂಡ 34:10) ಮೋಶೆಗಿಂಥ ಇಸ್ರಾಯೇಲಿನಲ್ಲಿ ಶ್ರೇಷ್ಠನಾದ ಯಾವುದೇ ಪ್ರವಾದಿ ಇರಲಿಲ್ಲ. ಆದುದರಿಂದ ವಾಗ್ದಾನ ಮಾಡಲ್ಪಟ್ಟ ಉತ್ತರಾಧಿಕಾರಿಯು ಸಾಮಾನ್ಯನಾಗಿರಲಿಕ್ಕಿಲ್ಲ.

ವಾಗ್ದತ್ತ ಪ್ರವಾದಿಯ "ಬಾಯಿಯಲ್ಲಿ" ದೇವರ ವಾಕ್ಯವು ಇರುವುದೆಂದು ಕರ್ತನು ಹೇಳಿದನು (ಧರ್ಮೋಪದೇಶಕಾಂಡ 18:18). ಆತನನ್ನು ಹಾಗೂ ಆತನ ವಾಕ್ಯವನ್ನು ಸ್ವೀಕರಿಸುವುದು ದೇವರನ್ನು ಸ್ವೀಕರಿಸುವುದಾಗಿದೆ, ಆದರೆ ಆತನನ್ನು ತಿರಸ್ಕರಿಸುವುದು, ಆತನ ವಾಕ್ಯವನ್ನು ತಿರಸ್ಕರಿಸುವುದು, ದೇವರನ್ನು ತಿರಸ್ಕರಿಸುವುದಾಗಿದೆ (ಧರ್ಮೋಪ

ದೇಶಕಾಂಡ 18:19).

ಈ ಅಸಾಮಾನ್ಯವಾದ ಪ್ರವಾದಿಯ ವಾಗ್ದಾನವನ್ನು ಮೋಶೆಯ ಜನರು ಎಂದಿಗೂ ಮರೆಯಲಿಲ್ಲ. ಆತನ ಬರೋಣಕ್ಕಾಗಿ ತಮ್ಮ ಮಕ್ಕಳಿಗಾಗಿ, ಮಕ್ಕಳ ಮಕ್ಕಳಿಗಾಗಿ ಕಾದುಕೊಂಡಿರಬೇಕೆಂದು ಬುದ್ಧಿವಾದ ಹೇಳಿದರು, "ಆ ಪ್ರವಾದಿ" (ಯೋಹಾನ 1:21, 25) ಎಂದು ಆತನ ಬಗ್ಗೆ ಅವರು ಹೇಳುವವರಾದರು. ಮೋಶೆಯ ನಂತರ ಹದಿನೈದು ಶತಮಾನಗಳಾದ ಮೇಲೆ, ಯೋಹಾನನ ಕಾರ್ಯವು ಜನರ ಮನವನ್ನು ಸೆಳೆಯುತ್ತಿದ್ದಾಗ, ಯೆಹೂದ್ಯರು ಧರ್ಮೋಪದೇಶಕಾಂಡ 18:15ರಲ್ಲಿ ಪ್ರವಾದಿಯ ಮುಂತಿಳಿಸುವಿಕೆಯನ್ನು ಕೂಡಲೇ ಯೋಚಿಸಿದರು ಮತ್ತು ಅವರು ಸ್ಪಷ್ಟವಾಗಿ ಯೋಹಾನನ್ನು, "ನೀನು ಬರಬೇಕಾದ ಆ ಪ್ರವಾದಿಯೋ?" (ಯೋಹಾನ 1:21) ಎಂದು ಪ್ರಶ್ನಿಸಿದರು. ಯೋಹಾನನಿಗಿಂತ ದೊಡ್ಡವ್ಯಕ್ತಿ ಯಾರೂ ಇರಲಿಲ್ಲ. ಆದರೆ ಅವನು ವಾಗ್ದತ್ತ ಪ್ರವಾದಿಯಾಗಿರಲಿಲ್ಲ. ಹಾಗೂ ಅವನು ತಾನು ಪ್ರವಾದಿಯಾಗಿರುವದಿಲ್ಲ ಎಂದು ತನಗೆ ಪ್ರಶ್ನೆ ಕೇಳಿದವರಿಗೆ ಸ್ಪಷ್ಟಪಡಿಸಿದನು.

ಹಾಗಿದ್ದರೂ, ಯಾವುದೇ ಅದ್ಭುತ ಕಾರ್ಯಗಳನ್ನು ಮಾಡದೇ ಇದ್ದ ಯೋಹಾನನಿಗೆ (ಯೋಹಾನ 10:41) ಒಬ್ಬ ಬಂಧುವು ಇದ್ದನು, ಆತನು ಐದು ಜವಗೋದಿ ರೊಟ್ಟಿಗಳನ್ನೂ ಎರಡು ಸಣ್ಣ ಮೀನುಗಳನ್ನು ಬಹುಶಃ ಹತ್ತು ಸಾವಿರ ಜನರಿಗಾಗಿ ಸಾಕಾಗಿ ಉಳಿಯುವಷ್ಟು ಹೆಚ್ಚಾಗಿ ಮಾಡಿದನು (ನೋಡಿರಿ ಯೋಹಾನ 6:9, 10). ಅಂಥ ದೃಢಪಡಿಸುವ ಸಂಕೇತವು ಧರ್ಮೋಪದೇಶಕಾಂಡ 18:15ರಲ್ಲಿಯ ಮೋಶೆಯ ವಾಗ್ದಾನದ ಬಗ್ಗೆ ಯೆಹೂದ್ಯರು ಯೋಚಿಸುವಂತೆ ಮಾಡಿತು. ಹಾಗೂ ಅವರು, "ಲೋಕಕ್ಕೆ ಬರಬೇಕಾದ ಪ್ರವಾದಿ ಈತನೇ ನಿಜ ಎಂದು ಹೇಳಿಕೊಂಡರು" (ಯೋಹಾನ 6:14).

ಯೇಸುವು ತಾನು ಸೃಷ್ಟಿಯ ಕರ್ತನು ಎಂದು ಪ್ರದರ್ಶಿಸಿದ್ದಲ್ಲದೇ, ಬೇರೆ ಮನುಷ್ಯನು ಎಂದೂ ಮಾತಾಡದ ರೀತಿಯಲ್ಲಿ ಮಾತಾಡಿದನು (ಯೋಹಾನ 7:46). ದೇವಾಲಯದಲ್ಲಿ ಆತನು ಒಂದು ದಿನ ಸಾಂಕೇತಿಕ ಪ್ರಕಟನೆ ಮಾಡಿದಾಗ, ಜನಸಮೂಹದಲ್ಲಿ ಕೆಲವು ಪ್ರಭಾವಹೊಂದಿದ ಯೆಹೂದ್ಯರು, ಧರ್ಮೋಪದೇಶಕಾಂಡ 18:15ನ್ನು ಮಹಾ ಪ್ರಸಂಗಿಯೊಂದಿಗೆ ಸಂಬಂಧಿಸಿ, ಒಬ್ಬರಿಗೊಬ್ಬರು, "ನಿಜವಾಗಿ ಈತನು ಬರಬೇಕಾದ ಪ್ರವಾದಿ" (ಯೋಹಾನ 7:40) ಎಂದು ಹೇಳಿದರು.

ಪೇತ್ರನು, ಸೊಲೊಮೋನನ ದ್ವಾರದ ಬಳಿಯಲ್ಲಿ, ಧರ್ಮೋಪದೇಶಕಾಂಡ 18:15ನ್ನು ತನ್ನ ಪ್ರಸಂಗದಲ್ಲಿ ಉಲ್ಲೇಖಿಸಿದನು ಯೇಸುವು ಹದಿನೈದು ವರ್ಷಗಳ ಪುರಾತನ ಮುಂತಿಳಿಸುವಿಕೆಯ ನೆರವೇರುವಿಕೆಯಾಗಿದೆಯೆಂದು ಹೇಳಿದನು (ಅಪೊಸ್ತಲರ ಕೃತ್ಯ 3:22). "ಆ ಪ್ರವಾದಿಗೆ" ವಿಧೇಯತೆಯ ಕೊರತೆಯು (ಅಪೊಸ್ತಲರ ಕೃತ್ಯ 3:23) ನಾಶನವು ಎಂದು ಅವನು ಎಚ್ಚರಿಸಿದನು. ಆದುದರಿಂದ ಸರಿಯಾಗಿ ಯೋಚಿಸುವ ಯೆಹೂದ್ಯರು, ತಾವೇ "ಪ್ರವಾದಿಗಳ ಮಕ್ಕಳಾಗಿದ್ದವರು" (ಅಪೊಸ್ತಲರ ಕೃತ್ಯ 3:25) ಯೇಸುವಿನಲ್ಲಿ ಮೋಶೆ ಮುಂತಿಳಿಸುವಿಕೆಯ ಹೇಳಿಕೆಯನ್ನು ಮಹಿಮೆಯುಳ್ಳ ದೈಹಿಕ ನೆರವೇರುವಿಕೆಯಾಗಿ ನೋಡಬಲ್ಲವರಾದರು.

## ಸಾಮ್ಯರೂಪವಾಗಿ ಉಪದೇಶಿಸುವಾತನು (ಕೀರ್ತನೆ 78:2)

ಇಸ್ರಾಯೇಲಿನಲ್ಲಿ ಆಸಾಫನು ಪ್ರಸಿದ್ಧನಾಗಿದ್ದನು. ಅವನು ಹಾಡುವವನೂ, ವಾದ್ಯ ಬಾರಿಸುವವನೂ ಆಗಿದ್ದು, ಮಂಜೂಷದ ವಾದ್ಯಮಂಡಳಿಯ ಮುಖ್ಯಸ್ಥನಾಗಿ ದಾವೀದನಿಂದ ನೇಮಿಸಲ್ಪಟ್ಟಿದ್ದನು (1 ಪೂರ್ವಕಾಲವೃತ್ತಾಂತ 6:31-33, 39;

15:19; 16:5). ಅವನು ದೀಘದರ್ಶಿಯಾಗಿರಲು ಪರಿಶುದ್ಧಾತ್ಮನಿಂದ ಬಲಪಡಿಸಲ್ಪಟ್ಟಿದ್ದನು (2 ಪೂರ್ವಕಾಲವೃತ್ತಾಂತ 29:30). ಸಂಗೀತಗಳ ಪ್ರೇರಿತ ಕರ್ತೃವಾಗಿದ್ದನು (ನೋಡಿರಿ ಕೀರ್ತನೆಗಳು 50, 73-83). ಅವನ ಕೀರ್ತನೆಗಳು ಕೀರ್ತನೆಗಳ ಗ್ರಂಥದಲ್ಲಿ ಕೀರ್ತನೆ 78ರಂಥ, ಬೋಧನೆ, ಭಕ್ತಿ ವೃದ್ಧಿಗೆ ಬರೆಯಲ್ಪಟ್ಟ ಸಂಗೀತವು *maskil* ಎಂದು ಕರೆಯಲ್ಪಟ್ಟಿತು. ಅವನ ಬೋಧನೆಯ ಭಾಗವು ಸಾಮ್ಯಗಳ ರೂಪದಲ್ಲಿ, ಅಂದರೆ ಅನ್ವಯಗಳೊಂದಿಗಿನ ಕಥೆಗಳು ಆಗಿತ್ತು. ಇತರ ಬೋಧನೆಗಳನ್ನು ಕತ್ತಲೆಯ ಹೇಳಿಕೆಗಳಲ್ಲಿ ಇಲ್ಲವೇ ಒಗಟುಗಳಲ್ಲಿ ಹೇಳಿದನು. "ನಾನು ಬಾಯ್ದೆರೆದು ಸಾಮ್ಯರೂಪವಾಗಿ ಉಪದೇಶಿಸುವೆನು, ಪೂರ್ವಕಾಲದ ಗೂಡಾರ್ಥಗಳನ್ನು ಹೊರಪಡಿಸುವೆನು" (ಕೀರ್ತನೆ 78:2) ಎಂದು ಹೇಳಿದನು.

ಪರಿಶುದ್ಧಾತ್ಮನು ಆಸಾಫನ ಅದೇ ಹೇಳಿಕೆಯನ್ನು ಆಸಾಫನಿಗಿಂತ ದೊಡ್ಡವನಾದಾತನು ಮಾಡುವಂಥದ್ದನ್ನು ಮುಂತಿಳಿಸಲು ಉಪಯೋಗಿಸಿದನು (ನೋಡಿರಿ ಮತ್ತಾಯ 13:35). ಜಗತ್ತಿನ ಪ್ರಾರಂಭದಿಂದ ರಹಸ್ಯವಾಗಿದ್ದಂತ ಸಂಗತಿಗಳನ್ನು ಹೇಳುತ್ತ ಯೇಸುವು ಸಹ ಇಸ್ರಾಯೇಲ್ಯರಿಗೆ ಸಾಮ್ಯಗಳನ್ನು ಬೋಧಿಸುವವನಾಗಿ ಬಂದನು. "ಪ್ರವಾದಿಯ ಮುಖಾಂತರ ಹೇಳಲ್ಪಟ್ಟಿದ್ದು ನೆರವೇರುವದಕ್ಕಾಗಿ" ಇದು ಮಾಡಲ್ಪಟ್ಟಿತು. "ನಾನು ಬಾಯ್ದೆರೆದು ಸಾಮ್ಯರೂಪವಾಗಿ ಉಪದೇಶಿಸುವೆನು. ಪೂರ್ವಕಾಲದ ಗೂಡಾರ್ತಗಳನ್ನು ಹೊರಪಡಿಸುವೆನು" ಎಂದು ಆಸಾಫನು ಹೇಳಿದನು.

## ಆತನ ತಂದೆಯ ಮನೆಗಾಗಿ ಆಸಕ್ತಿ (ಕೀರ್ತನೆ 69:9)

ಬಹುಶಃ ಪವಿತ್ರ ಗೂಡಾರಕ್ಕೆ ವಿರುದ್ಧವಾಗಿ ಯಾವುದೋ ಅಪಹಾಸ್ಯವು, "ನಿನ್ನ ಆಲಯಾಭಿಮಾನವು ನನ್ನನ್ನು ಬೆಂಕಿಯಂತೆ ದಹಿಸಿದೆ" ಎಂದು ದಾವೀದನು ಹೇಳಲಿಕ್ಕೆ ಕಾರಣವಾಗಿತ್ತು (ಕೀರ್ತನೆ 69:9). ಅದೇ ರೀತಿಯ ಅನಿಸುವಿಕೆಯು ಯೇಸುವಿನಲ್ಲಿ ಇರುವುದೆಂದು ದಾವೀದನ ಮುಖಾಂತರ ಪರಿಶುದ್ಧಾತ್ಮನು ನಿಶ್ಚಿತವಾಗಿ ಮುಂತಿಳಿಸಿದನು:

> ಅಲ್ಲಿ ದೇವಾಲಯದೊಳಗೆ ದನ ಕುರಿ ಪಾರಿವಾಳ ಮಾರುವವರನ್ನೂ ಕೂತಿರುವ ಚಿನಿವಾರರನ್ನೂ ಕಂಡು ಹಗ್ಗದಿಂದ ಕೊರಡೆ ಮಾಡಿ ಅದರಿಂದ ಕುರಿ ದನ ಸಹಿತ ಎಲ್ಲರನ್ನು ದೇವಾಲಯದ ಹೊರಕ್ಕೆ ಅಟ್ಟಿ ಚಿನಿವಾರರ ರೊಕ್ಕವನ್ನು ಚೆಲ್ಲಿ ಮೇಜುಗಳನ್ನು ಕೆಡವಿದನು, ಪಾರಿವಾಳ ಮಾರುವವರಿಗೆ, "ಇವುಗಳನ್ನು ಇಲ್ಲಿಂದ ತಕ್ಕೊಂಡು ಹೋಗಿರಿ; ನನ್ನ ತಂದೆಯ ಮನೆಯನ್ನು ಸಂತೆ ಮಾಡಬೇಡಿರಿ" ಎಂದು ಹೇಳಿದನು. ಆಗ "ನಿನ್ನ ಆಲಯಾಭಿಮಾನವು ಬೆಂಕಿಯಂತೆ ನನ್ನನ್ನು ದಹಿಸುತ್ತದೆ" ಎಂದು ಬರೆದ ಮಾತು ಶಿಷ್ಯರ ನೆನಪಿಗೆ ಬಂತು (ಯೋಹಾನ 2:14-17).

ಕೀರ್ತನೆ 69:9ರ ಎರಡನೆಯ ಭಾಗದ "ನಿನ್ನನ್ನು ದೂಷಿಸುವವರ ದೂಷಣೆಗಳು ನನ್ನ ಮೇಲೆ ಬಂದಿವೆ" ಎಂಬುದು ದಾವೀದನು ಗೂಡಾರವನ್ನು ಪ್ರತಿಪಾದಿಸಿಕೊಳ್ಳುವದಲ್ಲಿ ಪರಿಶುದ್ಧ ಗೂಡಾರವನ್ನು ಹೊಲೆ ಮಾಡುತ್ತಿದ್ದ ದುಷ್ಟ ಜನರಿಂದ ತಾನೇ ದೂಷಣೆ ಹೊಂದಿದ್ದಾನೆ ಎಂಬುದನ್ನು ತೋರಿಸುತ್ತದೆ. ದಾವೀದನ ಹೇಳಿಕೆಯನ್ನು ಕರೆದು ಸ್ಥಳಿಗ ಪರಿಸ್ಥಿತಿ ಏನೇ ಆಗಿದ್ದರೂ 9ನೇ ವಚನದ ಎರಡನೆಯ ಭಾಗವು ಯೇಸುವಿಗೆ ಏನು ಸಂಭವಿಸುವುದು ಎಂಬುದರ ಮುಂತಿಳಿಸುವಿಕೆಯಾಗಿದೆ. ಯೇಸುವು ತನ್ನ ತಂದೆಯ ಮನೆಯನ್ನು ಪ್ರತಿಪಾದಿಸಿದಾಗ, ದೇವಾಲಯವನ್ನು ದುರುಪಯೋಗಪಡಿಸುತ್ತಿದ್ದವರ

ದೂಷಣೆಗೆ ತನ್ನನ್ನು ಒಪ್ಪಿಸಿಕೊಟ್ಟನು. ಆತನು ತನ್ನ ಮರಣವನ್ನು ತ್ವರಿತಗೊಳಿಸುತ್ತಿದ್ದನು. ಯಾವುದೇ ರೀತಿಯಲ್ಲಿ ಆತನು ತನ್ನನ್ನು ಸಂತುಷ್ಟನನ್ನಾಗಿ ಮಾಡಿಕೊಳ್ಳುತ್ತಿರಲಿಲ್ಲ ಆತನು ಕೇವಲ ವಿಚಾರವು ಆತನ ತಂದೆಯ ಪರಿಶುದ್ಧತೆಯಾಗಿತ್ತು "ಯಾಕಂದರೆ ಕ್ರಿಸ್ತನು ಸಹ ತನ್ನ ಸುಖವನ್ನು ನೋಡಿಕೊಳ್ಳಲಿಲ್ಲ. ದೇವರೇ, ನಿನ್ನನ್ನು ದೂಷಿಸಿದರ ದೂಷಣೆಗಳು ನನ್ನ ಮೇಲೆ ಬಂದವು ಎಂಬುದಾಗಿ ಬರೆದಿರುವಂತೆ ಆತನಿಗೆ ಸಂಭವಿಸಿತಲ್ಲಾ" (ರೋಮಾಪುರ 15:3).

## ಎಲ್ಲಾ ಜನಾಂಗದವರನ್ನು ಆಶೀರ್ವದಿಸುವವನು (ಆದಿಕಾಂಡ 12:3)

ಸುಮಾರು ಕ್ರಿ.ಪೂ. 1886ರಲ್ಲಿ ದೇವರು ಅಬ್ರಹಾಮನಿಗೆ, "ನಿನ್ನ ಮೂಲಕ ಭೂಲೋಕದ ಎಲ್ಲಾ ಜನಾಂಗದವರಿಗೂ ಆಶೀರ್ವಾದವುಂಟಾಗುವುದು" (ಆದಿಕಾಂಡ 12:3) ಎಂದು ವಾಗ್ದಾನ ಮಾಡಿದನು. ಅಬ್ರಾಮನಲ್ಲಿ ಇಬ್ರಿಯರೂ ಅನ್ಯರೂ ಆಶೀರ್ವದಿಸಲ್ಪಡುವರೆಂದು ಸುಮಾರು ಎರಡು ಸಾವಿರ ವರ್ಷಗಳ ಮೊದಲೇ ಮುಂಚಿತವಾಗಿ ತಿಳಿಸಲ್ಪಟ್ಟಿತು. ಇಂದು ಕ್ರಿಸ್ತನನ್ನು ಸ್ವೀಕರಿಸುವ ಮತ್ತು ಕ್ರೈಸ್ತನಾಗುವ ಪ್ರತಿಯೊಬ್ಬನು ಆದಿಕಾಂಡ 12:3ರಲ್ಲಿ ಮೂಲವಾಗಿ ಮಾಡಲ್ಪಟ್ಟ ವಾಗ್ದಾನದಲ್ಲಿ ಪಾಲುಗಾರನಾಗುತ್ತಾನೆ. ನಂಬಿಕೆಯಿಂದ ದೇವರು ಅನ್ಯರನ್ನು ನೀತಿವಂತರನ್ನಾಗಿ ಮಾಡುವನೆಂದು ಪರಿಶುದ್ಧ ಬರಹಗಳ ಆ ವಾಕ್ಯ ಭಾಗವು ಮುಂತಿಳಿಸಿತು. "ನಿನ್ನ ಮೂಲಕ ಎಲ್ಲಾ ಜನಾಂಗದವರಿಗೆ ಆಶೀರ್ವಾದವುಂಟಾಗುವುದು" ಎಂದು ಹೇಳುವದರಿಂದ ದೇವರು ಅಬ್ರಹಾಮನಿಗೆ ಸುವಾರ್ತೆಯನ್ನು ಪ್ರಸಂಗಿಸಿದನು (ಗಲಾತ್ಯ 3:8). ಇದರ ಪರಿಣಾಮವು ವಿಶ್ವಾಸವುಳ್ಳ ಎಲ್ಲರೂ ನಂಬಿಗಸ್ತನೊಂದಿಗೆ, ಅಬ್ರಾಮನೊಂದಿಗೆ ಆಶೀರ್ವಾದಿಸಲ್ಪಡುವರು. ಕ್ರಿಸ್ತನಿಗೆ ಒಳಪಟ್ಟ ಎಲ್ಲರೂ, "ಸಮೂಹಗಳ ತಂದೆ" ಎಂಬರ್ಥವುಳ್ಳ, ಅಬ್ರಾಮ ಎಂದು ತಿಳಿಯಲ್ಪಟ್ಟ, "ಉನ್ನತ ತಂದೆ," ಅಬ್ರಾಮನ ಆತ್ಮಿಕ ಸಂತತಿಯಾದರು. ಜನಾಂಗಗಳೊಳಗೆ ವಿಶ್ವಾಸಕ್ಕೆ ವಿಧೇಯರಾಗುವವರು ನಂಬಿಗಸ್ತನ ತಂದೆಗೆ ಮಾಡಿದ ದೈವಿಕ ವಾಗ್ದಾನದ ಕಾನೂನು ಬದ್ಧ ಬಾಧ್ಯಸ್ಥರಾಗಿರುವರು. ಹೀಗೆ ಯೇಸುವಿಗೆ ತೋರಿಸಿದ ಎರಡು ಸಾವಿರ ವರ್ಷಗಳ ಹಿಂದಿನ ಮುಂತಿಳಿಸುವಿಕೆಯು, ಅಬ್ರಹಾಮನ ಕುಮಾರನು (ಮತ್ತಾಯ 1:1), ಒಬ್ಬ ಮನುಷ್ಯನಿಂದ ಒಂದು ಜನಾಂಗಕ್ಕೆ ಹಾಗೂ ಎಲ್ಲಾ ಜನಾಂಗಗಳಿಗೆ ಅಬ್ರಹಾಮನ ಆಶೀರ್ವಾದವು ವಿಸ್ತರಿಸುತ್ತಿದ್ದ ಸರಪಣಿಯಲ್ಲಿ ಪ್ರಾಮುಖ್ಯವಾದ ಕೊಂಡಿಯಾಗಿರುತ್ತದೆ. ಈ ಕಾರಣದಿಂದ, ಆದಿಕಾಂಡ 12:3 ಪ್ರಮುಖ ಮೆಸ್ಸೀಯನ ಪ್ರವಾದನೆಯಾಗಿದೆ.

## ಅನ್ಯ ಜನಾಂಗಗಳಿಗೆ ಬೆಳಕು (ಯೆಶಾಯ 49:6)

ದೇವರ ಪ್ರೀತಿಯ ಜ್ಞಾನದಲ್ಲಿ, ಆತನು ವಾಗ್ದಾನ ಮಾಡಿದ ಬರಲಿಕ್ಕಿದ್ದ ಸೇವಕನು ಯಾಕೋಬನ ಗೋತ್ರಗಳಿಗೆ ಮಾತ್ರವೇ ಸೇವೆ ಮಾಡುವುದು ಸಾಕಾಗಿರಲಿಲ್ಲ. ಜಗತ್ತಿನ ಎಲ್ಲಾ ಜನಾಂಗಗಳಿಗೆ ರಕ್ಷಿಸುವ ಬೆಳಕಿನಂತೆ ಆತನು ತನ್ನನ್ನೇ ವಿಸ್ತರಿಸುವನು:

> ಆತನೇ ಈಗ ಹೀಗನ್ನುತ್ತಾನೆ, "ನೀನು ನನ್ನ ಸೇವಕನಾಗಿ ಮಾಡಬೇಕಾದವು ಗಳಲ್ಲಿ ಯಾಕೋಬನ ಕುಲಗಳನ್ನು ಉನ್ನತಪಡಿಸುವುದೂ ಇಸ್ರಾಯೇಲಿನಲ್ಲಿ ರಕ್ಷಿತರಾದವರನ್ನು ತಿರಿಗಿ ಬರಮಾಡುವುದೂ ಅಲ್ಪ ಕಾರ್ಯವೇ ಸರಿ;
> ನನ್ನ ರಕ್ಷಣೆಯು ಲೋಕದ ಕಟ್ಟಕಡೆಯವರೆಗೆ ವ್ಯಾಪಿಸುವಂತೆ ನಿನ್ನನ್ನು ಅನ್ಯ ಜನಾಂಗಗಳಿಗೂ ಬೆಳಕನ್ನಾಗಿ ದಯಪಾಲಿಸುವೆನು" (ಯೆಶಾಯ 49:6).

ದೇವರೇ ತನ್ನ ಬಲವಾಗಿರುವಂತೆ ದೇವರ ಸೇವಕನಾಗಿ ಮುಂಚಿತವಾಗಿಯೇ ನೇಮಿಸಲ್ಪಟ್ಟ ಗೌರವಾನ್ವಿತ ಈ ವ್ಯಕ್ತಿಯು ಯಾರು? (ಯೆಶಾಯ 49:5). ತನ್ನ ಸ್ವಂತವರನ್ನು ಮಾತ್ರವಲ್ಲದೆ ಇತರ ಜನಾಂಗಗಳನ್ನೂ ಸಹ ಆಶೀರ್ವದಿಸಲು ಯಾರು ವರ ಹೊಂದಿದ್ದಾರೆ? ಯೇಸುವು ಮರಿಯಳ ಗರ್ಭದಲ್ಲಿ ರೂಪಿಸುವುದಕ್ಕಿಂತ ಮೊದಲೇ, ಆತನು ವಾಗ್ದಾನ ಮಗುವಾಗಿದ್ದನು. ಆಶ್ಚರ್ಯಚಕಿತಳಾದ ನಜರೇತಿನ ಕನ್ನಿಕೆಗೆ ಗಬ್ರಿಯೇಲನು, "ಇಗೋ, ನೀನು ಗರ್ಭಿಣಿಯಾಗಿ ಒಬ್ಬ ಮಗನನ್ನು ಹೆರುವಿ; ಆತನಿಗೆ ಯೇಸು ಎಂದು ಹೆಸರಿಡಬೇಕು" (ಲೂಕ 1:31) ಎಂದು ಹೇಳಿದನು. ಈ ಮಗನು, ದೇವರ ಸೇವಕನಾಗಿರಲು ಗರ್ಭದಿಂದಲೇ ರೂಪಿಸಲ್ಪಟ್ಟನು, ತನ್ನ ಸ್ವಂತ ಜನರಿಗೆ ತಾನು ಮಾಡಬೇಕಾದಷ್ಟು ಸಹಾಯ ಮಾಡಿದನು. ಯಾರಾರು ಆತನನ್ನು ಅಂಗೀಕರಿಸಿದರೋ, ಅಂದರೆ ಆತನ ಹೆಸರಿನಲ್ಲಿ ನಂಬಿಕೆಯಿಟ್ಟರೋ ಅವರಿಗೆ ದೇವರ ಮಕ್ಕಳಾಗುವ ಅಧಿಕಾರ ಕೊಟ್ಟನು (ಯೋಹಾನ 1:12), ಅದಲ್ಲದೇ ತನ್ನ ಶಿಷ್ಯರಿಗೆ ಕೊಟ್ಟ ನಿರಂತರವಾದ ಆಜ್ಞೆಯು ಅವರು ಸುವಾರ್ತೆಯನ್ನು ಎಲ್ಲಾ ಜನಾಂಗಗಳಿಗೆ ತೆಗೆದು ಕೊಂಡು ಹೋಗುವುದಾಗಿತ್ತು. ಮೊದಲು ಯೆಹೂದ್ಯರಿಗೆ, ಅನಂತರ ಅನ್ಯರಿಗೆ ಸುವಾರ್ತೆಯನ್ನು ಕೊಡುವ ವಿಧಾನವನ್ನು ಅಪೊಸ್ತಲರು ಅನುಸರಿಸಿದರು.

ಪಿಸಿದ್ಯದ ಅಂತಿಯೋಕ್ಯದಲ್ಲಿ ಯೆಹೂದ್ಯರು ಕರ್ತನ ಸುವಾರ್ತೆಯನ್ನು ವಿರೋಧಿಸಿದಾಗ, ಪೌಲ ಮತ್ತು ಬಾರ್ನಬರು ಹೀಗೆ ಹೇಳಿದರು:

> ದೇವರ ವಾಕ್ಯವನ್ನು ಮೊದಲು ನಿಮಗೇ ಹೇಳುವದು ಅವಶ್ಯವಾಗಿತ್ತು; ಆದರೆ ನೀವು ಅದನ್ನು ತಳ್ಳಿಬಿಟ್ಟು ನಿಮ್ಮನ್ನು ನಿತ್ಯ ಜೀವಕ್ಕೆ ಅಪಾತ್ರರೆಂದು ತೀರ್ಪುಮಾಡಿ ಕೊಂಡದ್ದರಿಂದ ಇಗೋ, ನಾವು ನಿಮ್ಮನ್ನು ಬಿಟ್ಟು ಅನ್ಯಜನರ ಕಡೆಗೆ ಹೋಗುತ್ತೇವೆ. ಹಾಗೆಯೇ ಕರ್ತನು ನಮಗೆ ಅಪ್ಪಣೆ ಕೊಟ್ಟಿದ್ದಾನೆ; ಹೇಗಂದರೆ,
>
> "ನೀನು ಲೋಕದ ಕಟ್ಟಕಡೆಯ ವರೆಗೆ ರಕ್ಷಕನಾಗಿರುವಂತೆ ನಿನ್ನನ್ನು ಅನ್ಯಜನಾಂಗಗಳಿಗೂ ಬೆಳಕನ್ನಾಗಿ ನೇಮಿಸಿದ್ದೇನೆ" (ಅಪೊಸ್ತಲರ ಕೃತ್ಯ 13:46, 47).

## ಜನಾಂಗಗಳ ಧ್ವಜಪ್ರಾಯನು (ಯೆಶಾಯ 11:10)

ಸುವಾರ್ತಾ ಪ್ರವಾದಿಯ ಮುಂತಿಳಿಸುವಿಕೆಯು ಧೈರ್ಯವುಳ್ಳದ್ದಾಗಿತ್ತು: "ಆ ದಿನದಲ್ಲಿ ಜನಾಂಗಗಳು ತಮಗೆ ಧ್ವಜ ಪ್ರಾಯನಾಗಿ ನಿಂತಿರುವ ಇಷಯನ ಅಂಕುರದವನನ್ನು ಆಶ್ರಯಿಸುವರು; ಅವನ ವಿಶ್ರಮಸ್ಥಾನವು ವೈಭವವುಳ್ಳದ್ದಾಗಿರುವುದು" (ಯೆಶಾಯ 11:10).

ಕ್ರಿ.ಪೂ. ಎಂಟನೆಯ ಶತಮಾನದೊಳಗಿಂದ ಹೆಚ್ಚಾಗಿ ನಂಬಲಸಾಧ್ಯವಾದ ಮುಂತಿಳಿಸುವಿಕೆಗಳು ಬಂದವು. ಯೆಶಾಯನ ವಂಶಜರಲ್ಲಿ ಒಬ್ಬಾತನ ಮೇಲೆ (ಯೆಶಾಯ 11) ದೇವರ ಆತ್ಮನು ನೆಲೆಗೊಂಡು, ಆತನಿಗೆ ವಿಶೇಷ ಜ್ಞಾನವನ್ನು ಕೊಡುವನು. ಆತನು ಕಣ್ಣಿಗೆ ಕಂಡಂತೆ ತೀರ್ಪುಮಾಡುವದಿಲ್ಲ, ಕಿವಿಗೆ ಬಿದ್ದಂತೆ ನಿರ್ಣಯಿಸುವದಿಲ್ಲ (ಯೆಶಾಯ 11:3, 4). ಆದರೆ, ನ್ಯಾಯವಾಗಿ ತೀರ್ಪುಮಾಡುವನು. ಬಡವರೂ ಹಿಂಸಗೊಳಗಾದವರೂ ಯೋಗ್ಯ ನಿರ್ಣಯ ಹೊಂದುವರು (ಯೆಶಾಯ 11:4). ದುಷ್ಟ ಜನರು ಒಂದು ದಿನ ಆತನ ರೋಷವನ್ನು ಅನುಭವಿಸುವರು (ಯೆಶಾಯ 11:4). ಸಾಂಕೇತಿಕವಾಗಿ "ಧರ್ಮವೇ ಅವನಿಗೆ ನಡುಕಟ್ಟು, ಪ್ರಾಮಾಣಿಕತೆಯೇ ಸೊಂಟಪಟ್ಟಿ" (ಯೆಶಾಯ 11:5).

ಹಾಗೆಯೇ ಆತನ ಬಲದ ದಿನಗಳಲ್ಲಿ "ಚಿರತೆಯು ಮೇಕೆಮರಿಯೊಂದಿಗೆ ಮಲಗುವುದು" ಎಂದು ಯೆಶಾಯನು ಸಾಂಕೇತಿಕವಾಗಿ ಹೇಳಿದನು (ಯೆಶಾಯ 11:6). ಆತನ ಪರಿಶುದ್ಧ ಪರ್ವತದಲ್ಲಿ ಹಿಂಸೆಯಾಗಲೀ, ಕೀಳು ಮಟ್ಟವಾಗಲೀ ಇರುವದಿಲ್ಲ ಮತ್ತು ಈ ನಾಯಕನ ಜ್ಞಾನವು ವಿಶ್ವವ್ಯಾಪಿಯಾಗಿರುವುದು (ಯೆಶಾಯ 11:9). ಜನಾಂಗಗಳಿಗೆ ಆತನು ಧ್ವಜ ಪ್ರಾಯನು, ನಿಶಾನೆಯು ಆಗಿರುವನು. ಹಾಗೂ ಅನ್ಯಜನರು ಆತನನ್ನು ಹುಡುಕುವರು (ಯೆಶಾಯ 11:10). ಆತನ ವಾಸಸ್ಥಾನವು ಮಹಿಮೆಯುಳ್ಳದ್ದಾಗಿರುವುದು. ಇಸ್ರಾಯೇಲ್ಯರಲ್ಲಿ ಸೆರೆಗೆ ಒಯ್ಯಲ್ಪಟ್ಟವರನ್ನೂ ಯೆಹೂದರಿಂದ ಚದರಿದವರನ್ನೂ ಭೂಮಿಯ ಚತುರ್ದಿಕ್ಕುಗಳಿಂದಲೂ ಕೂಡಿಸಿಕೊಳ್ಳುವನು. ಇಷಯನ ವಂಶಜನಿಗೆ ಅದರ ಧ್ವಜಪ್ರಾಯನಂತೆ ನೋಡುವರು (ಯೆಶಾಯ 11:12).

ಇಷಯನ ಮಕ್ಕಳಲ್ಲಿ ಯೇಸುವು ಮಾತ್ರವೇ ಸಮಗ್ರವಾದ ಹಾಗೂ ಮಹಿಮೆ ಯುಳ್ಳ ಯೆಶಾಯನ ಮುಂತಿಳಿಸುವಿಕೆಯನ್ನು ಪೂರೈಸುವಾತನಂತೆ ಅರ್ಹತೆಯುಳ್ಳವ ನಾಗಿರುವನು (ರೋಮಾಪುರ 15:12). ನಜರೇತಿನ ಯುವಕನಾದ, ಶಾಲೆಕಲಿಯದ ಬಡಗಿಯ ಜ್ಞಾನವು ಆತನು ಬೆಳೆದ ಪಟ್ಟಣದ ಜನರನ್ನು ಚಕಿತಗೊಳಿಸಿತ್ತು: "ಇವನು ಪಡೆದಿರುವ ಈ ಜ್ಞಾನವೇನು?" ಎಂದು ಅವರು ಕೇಳಿದರು (ಮಾರ್ಕ 6:2). ಸಬ್ಬತ್ ದಿನದಂದು ಒಬ್ಬ ಅಂಗವಿಕಲನನ್ನು ಗುಣಪಡಿಸುವದರಿಂದ ಆತನು ಯೆಹೂದ್ಯರನ್ನು ಆಶ್ಚರ್ಯ ಚಕಿತರನ್ನಾಗಿ ಮಾಡಿದನು; ಈ ಒಳ್ಳೆಯ ಕಾರ್ಯವನ್ನು ಮಾಡಿದ್ದು ಆತನು ಖಂಡನೆಗೆ ಗುರಿಯಾಗುವಂತೆ ಮಾಡಿತು (ಯೋಹಾನ 7:23, 24). ಬಹಿಷ್ಕೃತರೊಂದಿಗೆ, ಪ್ರೀತಿಸಲ್ಪಡದವರೊಂದಿಗೆ ಆತನು ಸಹಾನುಭೂತಿ ತೋರಿಸಿದನು (ಮತ್ತಾಯ 21:31; 9:10), ಇದು ಯೆಶಾಯನು ಮುಂತಿಳಿಸಿದಂತೆ ಇತ್ತು (11:4). ಯೆಶಾಯನು ಮುಂತಿಳಿಸಿದಂತೆ (11:5) ಆತನ ನೀತಿಯು, ಆತನನ್ನು "ಸತ್ಪುರುಷನು" ಎಂದು ಕರೆದ ಪಿಲಾತನ ಹೆಂಡತಿಯಿಂದ ಒಪ್ಪಿಕೊಳ್ಳಲ್ಪಟ್ಟಿತು (ಮತ್ತಾಯ 27:19).

ಅಕ್ಷರಶಃವಾಗಿ, ತೋಳಗಳು ಕುರಿಮರಿಗಳೊಂದಿಗೆ ಸಮಾಧಾನದಿಂದ ಮಲಗುವಂತೆ ಎಂದೂ ಪ್ರಯತ್ನಿಸಲಿಲ್ಲ, ಹಾಗೂ ಆತನ ಸಭೆಯೂ ಹಾಗೆ ಮಾಡಲಿಲ್ಲ (ಯೆಶಾಯ 11:6). ಎರಡನೆಯ ಸಲ ಆತನು ಬರುವಾಗ, ಕಾಡು ಮೃಗಗಳನ್ನು ಸಾಧು ಪ್ರಾಣಿಗಳನ್ನಾಗಿ ಮಾಡುವದಕ್ಕೆ ಬಹಳ ತಡವಾಗಿ ಹೋಗಿರುತ್ತದೆ. ಯಾಕಂದರೆ ಆಗ ವಿಶ್ವದ ನಾಶನದ ಬೆಂಕಿಯಲ್ಲಿ ಎಲ್ಲವೂ ಸುಟ್ಟು ಹೋಗಿರುತ್ತದೆ (2 ಪೇತ್ರ 3:10). ತೋಳ /ಕುರಿಮರಿಯ ಪ್ರವಾದನೆಯ ಅಕ್ಷರಶಃ ನೆರವೇರುವಿಕೆಯನ್ನು ನೋಡಿದರೆ, ಅವನು ಎಂದೆಂದಿಗೂ ನಿರಾಶನಾಗುವನು. ಹಾಗಿದ್ದರೂ, ಅದರ ಅರ್ಥವು ಸಾಂಕೇತಿಕವಾ ದದ್ದೆಂದು ಒಬ್ಬನು ನೋಡಿದನು, (ಯೆಶಾಯ 11:5ರಲ್ಲಿ ಪ್ರಮಾಣಿಕತೆಯು ಸೊಂಟಪಟ್ಟಿ ಎಂದು ಕರೆಯಲ್ಪಟ್ಟಂತೆ) ಆಗ ಎಲ್ಲವೂ ಏಕಮತದ್ದಾಗುವುದು.

ಸಾಮ್ಯರೂಪವಾಗಿ, ತೋಳಗಳಂತಿರುವ ಮನುಷ್ಯರು ಕುರಿಮರಿಗಳಂತೆ ಬದಲಾ ಗಿದ್ದಾರೆ ಹಾಗೂ ಮಗುವಿಗೆ ತೊಂದರೆಕೊಡುವದಿಲ್ಲ (ನೋಡಿರಿ ಯೆಶಾಯ 65:17-25). ಮೃಗಸ್ವಭಾವದ ಜನರು ಸ್ವಾರ್ಥರಹಿತ ಪ್ರೀತಿಯ ಕ್ರಿಸ್ತನ ಸುವಾರ್ತೆಯ ಬಲದಿಂದ ದಯೆಯ ಮತ್ತು ಸಹಾಯ ಮಾಡುವ ಜನರಾಗಿ ಪುನರುಜ್ಜೀವನಗೊಂಡಿದ್ದಾರೆ. ಒಬ್ಬನು ಈ ಸಾಮ್ಯರೂಪದ ಈ ಅರ್ಥವನ್ನು ಗ್ರಹಿಸಿಕೊಂಡಾಗ ಹಾಗೂ ಪಾಪಿ ಮನುಷ್ಯನಲ್ಲಿ ಅದು ನೆರವೇರುವದನ್ನು ನೋಡುವಲ್ಲಿ ಆಶ್ಚರ್ಯ ಚಕಿತನಾಗುವಾಗ, ಸುವಾರ್ತೆಯ ಧ್ಯೇಯವು ಕಾಡು ಮೃಗಗಳನ್ನು ಬಂಧಿಸಿ ಸಾಧು ಪ್ರಾಣಿಗಳನ್ನಾಗಿ ಮಾಡುವುದು ಆಗಿದ್ದರೆ ಅದು ಎಷ್ಟು ಬಲಹೀನವಾದದ್ದಾಗಿರುವುದೆಂಬುದನ್ನು ಅರ್ಥಮಾಡಿಕೊಳ್ಳು ತ್ತಾನೆ. ನಿಶ್ಚಯವಾಗಿಯೂ ಯೆಶಾಯ ಮತ್ತು ಯೇಸುವಿನ ಮನಸ್ಸಿನಲ್ಲಿ ಇನ್ನೂ ಹೆಚ್ಚು

ಮಹತ್ವವುಳ್ಳದ್ದು ಇತ್ತು.

ಸಾಮ್ಯರೂಪದ ಅರ್ಥವು "ಪರಿಶುದ್ಧ ಪರ್ವತದ" ಬಗೆಗಿನ ಮುಂತಿಳಿಸುವಿಕೆಯಲ್ಲಿ ಮುಂದುವರಿಯುತ್ತದೆ, ಅದು ಹೊಸ ಒಡಂಬಡಿಕೆಯ ಸಭೆಗೆ ಉಲ್ಲೇಖವಾಗಿದೆ (ಇಬ್ರಿಯ 12:22, 23). ಸತ್ಯದ ಸ್ತಂಭದಂತೆ ಆ ಸಭೆಯೊಂದಿಗೆ, ಸುವಾರ್ತಾ ಸಂದೇಶವು ಸಮುದ್ರವನ್ನು ನೀರು ಮುಚ್ಚಿಕೊಳ್ಳುವಂತೆ ಲೋಕದ ಎಲ್ಲಾ ಕಡೆಗಳಲ್ಲಿ ಹೋಗಿದೆ (ಯೆಶಾಯ 11:9; ನೋಡಿರಿ ಕೊಲೊಸ್ಸೆ 1:5, 6). ಯೆಹೂದ್ಯರ ಮತ್ತು ಅನ್ಯರ ಇಬ್ಬರ ಮಧ್ಯದಲ್ಲಿಯ ಒಳ್ಳೇ ಚಿತ್ತದ ಮನುಷ್ಯರಿಗಾಗಿ ಯೇಸುವು ಜಗತ್ತಿನ ಮಟ್ಟವನ್ನು ಹೊತ್ತುಕೊಂಡು ಹೋಗುವಾತನೂ, ಜನಾಂಗಗಳ ಧ್ವಜವೂ ಆಗಿದ್ದಾನೆ (ನೋಡಿರಿ ಯೆಶಾಯ 49:22; 62:10; ಯೋಹಾನ 3:14-16; 12:32).

ಇಷಯನ ಮಗನಾದ ಯೇಸುವು, ಯೆಶಾಯನು ಮಾತನಾಡಿದಾತನು ಧ್ವಜವಾಗಿ ರದಿದ್ದರೆ, ಆಗ, ಅಯ್ಯೋ, ದೇವರ ವಾಕ್ಯವು ನೆಲಕ್ಕೆ ಬಿದ್ದುಹೋಗುವುದು. ಕ್ರಿ.ಶ. 70ರಲ್ಲಿ ಇಷಯನ ವಂಶಜರಿಗೆ ಸಾಕ್ಷಿಕೊಟ್ಟ ವಂಶಾವಳಿಯ ಸುರುಳಿಗಳು ನಾಶಪಡಿಸಲ್ಪಟ್ಟವು. ಕ್ರಿ.ಶ. 70ರಲ್ಲಿ ಮೊದಲು ಇಷಯನ ನ್ಯಾಯವಾದ ಮಗನು ತನ್ನನ್ನು ಗುರುತಿಸಿ ಕೊಳ್ಳುವಲ್ಲಿ ಸೋತು ಹೋಗಿದ್ದರೆ, ಮತ್ತು ಯೆಶಾಯನ ಪ್ರವಾದನೆಯ ಧ್ವಜವಾಗಿ ದ್ದೇನೆಂದು ಸಿದ್ಧಪಡಿಸಿ ತೋರಿಸುವಲ್ಲಿ ಸೋತು ಹೋಗಿದ್ದರೆ, ಆಗ ಎಲ್ಲಾ ಮಾನವ ಜನಾಂಗವು ದುಃಖದಲ್ಲಿ ಸತ್ತು ಹೋಗತಕ್ಕದ್ದು. ಯಾವುದೇ ಮುಂದಿನ ನಿರೀಕ್ಷೆಯು ಮಾನವ ನಿರೀಕ್ಷೆಗಳನ್ನು ಬೆಳಗಿಸಲಾರದು. ಇದು ಹೀಗಿದ್ದರೆ, ಆಗ ಮಹಿಮೆಯುಳ್ಳ ಭವಿಷ್ಯದ ಇಸ್ರಾಯೇಲಿನ ಕುತೂಹಲ ಭರಿತವಾದ ತೋರಿಸುವಿಕೆಯು ನೆರವೇರಲಿಕ್ಕೆ ಅಸಾಧ್ಯವಾದ ಪ್ರಯೋಜನವಿಲ್ಲದ ಕನಸಾಗುವುದು. ಕ್ರಿ.ಶ. 70ರಿಂದ ಯಾರೂ ತನ್ನನ್ನು ಇಷಯನ ವಂಶದ ಭಾಗವೆಂದು ಗುರುತಿಸಿಕೊಂಡಿರುವದಿಲ್ಲ.

## ನ್ಯಾಯವನ್ನು ತರುವಾತನು (ಯೆಶಾಯ 42:1-4)

ಶಾಂತತೆಯಲ್ಲಿ ಆದರೆ ಜಯಿಸಲಾಗದ ದೃಢತೆಯಲ್ಲಿ ದೇವರ ಸೇವಕನಂತೆ ಒಬ್ಬಾತನು ಭೂಲೋಕದಲ್ಲಿ ನ್ಯಾಯವನ್ನು ತರುವನೆಂದು ಯೆಶಾಯ 42:1-4ರಲ್ಲಿ ಮುಂತಿಳಿಸಲ್ಪಟ್ಟಿದೆ:

"ಇಗೋ, ನನ್ನ ಸೇವಕನು! ಇವನಿಗೆ ನಾನೇ ಆಧಾರ;
ಇವನು ನನಗೆ ಇಷ್ಟನು, ನನ್ನ ಪ್ರಾಣ ಪ್ರಿಯನು.
ಇವನಲ್ಲಿ ನನ್ನ ಆತ್ಮವನ್ನು ಇರಿಸಿದ್ದೇನೆ.
ಇವನು ಅನ್ಯಜನಗಳಲ್ಲಿಯೂ ನ್ಯಾಯವನ್ನು ಪ್ರಚುರಪಡಿಸುವನು.
ಇವನು ಕೂಗಾಡುವದಿಲ್ಲ, ಆರ್ಬಟಿಸುವದಿಲ್ಲ,
ಬೀದಿಗಳಲ್ಲಿ ಇವನ ಧ್ವನಿಯೇ ಕೇಳಿಸುವದಿಲ್ಲ.
ಜಜ್ಜಿದ ದಂಟನ್ನು ಮುರಿದು ಹಾಕದೆ
ಕಳೆಗುಂದಿದ ದೀಪವನ್ನು ನಂದಿಸದೇ
ನ್ಯಾಯವನ್ನು ಪ್ರಚುರಪಡಿಸಿ ಸಿದ್ಧಿಗೆ ತರುವನು.
ಲೋಕದಲ್ಲಿ ನ್ಯಾಯವನ್ನು ಸ್ಥಾಪಿಸುವ ತನಕ ಇವನು ಕಳೆ ಗುಂದದೆಯೂ ಜಜ್ಜಿ
ಹೋಗದೆಯೂ [ತನ್ನ ಕಾರ್ಯದಲ್ಲಿ ನಿರತನಾಗಿರುವನು];
ದ್ವೀಪ ದ್ವೀಪಾಂತರಗಳು ಇವನ ಧರ್ಮ ಪ್ರಮಾಣಕ್ಕೆ ಕಾದಿರುವವು."

ಈ ಮುಂತಿಳಿಸುವಿಕೆಯಲ್ಲಿ "ನ್ಯಾಯ" ಎಂಬ ಪದವು ಮೂರು ಸಲ ಕಂಡುಬರುತ್ತದೆ. ಸತ್ಯದಲ್ಲಿ ನ್ಯಾಯವನ್ನು ತರುವಾತನು ಕೋಲಾಹಲ ತರುವಾತನಾಗಿರುವದಿಲ್ಲ ಇಲ್ಲವೇ ಬೀದಿಗಳಲ್ಲಿ ಆಕರ್ಷಕವಾದ ಭಾಷಣಗಳನ್ನು ಮಾಡುವಾತನಲ್ಲ. ಆತನು ಜಜ್ಜಿದ ದಂಟಿಗೆ, ಮಾನಸಾಂತರಪಟ್ಟ ಪಾಪಿಗೆ ಎರಡನೆಯ ಅವಕಾಶಕೊಡುವವನು; ಕಳೆಗುಂದಿದ ದೀಪ ದಲ್ಲಿ, ತಗ್ಗಿಸಿಕೊಂಡ ಪಾಪಿಯಲ್ಲಿ ನಿರೀಕ್ಷೆಯ ಜ್ವಾಲೆಯನ್ನು ಸಜೀವವಾಗಿ ಇಡುವನು. ತನ್ನ ಕಾರ್ಯವನ್ನು ಪೂರ್ತಿಗೊಳಿಸುವವರೆಗೆ ಆತನು ಬಿಟ್ಟು ಹೋಗುವದಿಲ್ಲ ಮತ್ತು ಆತನ ನ್ಯಾಯದ ಸೂತ್ರಗಳು ಎಲ್ಲಾ ಜನಾಂಗಗಳ ಜನರಿಂದ ಮುನ್ನೋಡಲ್ಪಡುವವು.

ಯಾರ ಬಗ್ಗೆ ಅಂಥ ಆಶಾದಾಯಕವಾದ, ನಿರೀಕ್ಷೆಯುಳ್ಳ ಮತ್ತು ಅರ್ಥ ಗರ್ಭಿತವಾದ ಹೇಳಿಕೆಗಳು ಉಚ್ಚರಿಸಲ್ಪಡುವವು? ಮತ್ತಾಯನ ಪ್ರಕಾರವಾಗಿ ನಜರೇತಿನ ಯೇಸುವು ಪುರಾತನ ಪ್ರವಾದನೆಯಲ್ಲಿ ಹೇಳಲ್ಪಟ್ಟ ಸೇವಕನಾಗಿರುವನು:

> ಇಗೋ, ನನ್ನ ಸೇವಕನು; ಈತನನ್ನು ನಾನು ಆರಿಸಿಕೊಂಡಿದ್ದೇನೆ;
> ಈತನು ನನಗೆ ಇಷ್ಟನು; ನನ್ನ ಪ್ರಾಣ ಪ್ರಿಯನು.
> ಈತನಲ್ಲಿ ನನ್ನ ಆತ್ಮವನ್ನು ಇರಿಸುವೆನು;
> ಈತನು ಅನ್ಯಜನಗಳಿಗೂ ನ್ಯಾಯವಿಧಿಯನ್ನು ಸಾರುವನು.
> ಈತನು ಜಗಳಾಡುವದಿಲ್ಲ, ಕೂಗಾಡುವದಿಲ್ಲ;
> ಬೀದಿಗಳಲ್ಲಿ ಈತನ ಧ್ವನಿಯು ಯಾರಿಗೂ ಕೇಳಿಸುವದಿಲ್ಲ.
> ಜಜ್ಜಿದ ದಂಟವನ್ನು ಮುಂದು ಹಾಕದೆಯೂ
> ಆರಿಹೋಗುತ್ತಿರುವ ದೀಪವನ್ನು ನಂದಿಸದೆಯೂ
> ನ್ಯಾಯವನ್ನು ದಿಗ್ವಿಜಯಕ್ಕಾಗಿ ಕಳುಹಿಸಿಕೊಡುವನು.
> ಅನ್ಯಜನರು ಈತನ ಹೆಸರನ್ನು ಕೇಳಿ ನಿರೀಕ್ಷೆಯಿಂದಿರುವರು (12:18-21).

## ನಿಷ್ಕಾರಣವಾಗಿ ದ್ವೇಷಿಸಲ್ಪಟ್ಟಾತನು (ಕೀರ್ತನೆ 35:19; 69:4)

ದಾವೀದನು ಬಹಳ ಸಲ ವಿನಾಕಾರಣವಾದ ವೈರತ್ವದ ಬಲಿಪಶುವಾಗಿದ್ದನು. ಕನಿಷ್ಠಪಕ್ಷ ಎರಡು ಸಲ ದಾವೀದನು ಹಲವಾರು ವೈರಿಗಳ ಬಗ್ಗೆ ಬರೆದನು: "ನಿಷ್ಕಾರಣ ವಾಗಿ ನನ್ನನ್ನು ದ್ವೇಷಿಸುತ್ತಾರೆ" (ಕೀರ್ತನೆ 35:19); "ನಿಷ್ಕಾರಣ ದ್ವೇಷಿಗಳು ನನ್ನ ತಲೆಗೂದಲುಗಳಿಗಿಂತ ಹೆಚ್ಚಾಗಿದ್ದಾರೆ" (ಕೀರ್ತನೆ 69:4).

ಮತ್ಸರದ ಹೆಚ್ಚು ಅನರ್ಹತೆಯುಳ್ಳಾತನು ಪ್ರತಿಯೊಬ್ಬ ಮಾನವ ಜೀವಿಯನ್ನು ಆಳವಾಗಿ ಪ್ರೀತಿಸಿದಾತನು ಮತ್ತು ಯಾರಿಗೂ ಎಂದೂ ಕೇಡನ್ನು ಬಯಸದವನೂ ಆಗಿದ್ದನು. ಆತನ ಬಾಯಲ್ಲಿ ಯಾವ ಮೋಸವೂ ಇರಲಿಲ್ಲ (1 ಪೇತ್ರ 2:22), ಆತನು ಪರಿಶುದ್ಧನೂ, ಯಥಾರ್ಥನೂ ಹೊಲೆಯಾಗದವನೂ, ಪಾಪಿಗಳಿಂದ ಪ್ರತ್ಯೇಕವಾಗಿದ್ದವನೂ ಪರಲೋಕಗಳಲ್ಲಿ ಉನ್ನತಕ್ಕೇರಿಸಲ್ಪಟ್ಟವನೂ ಆಗಿದ್ದನು (ಇಬ್ರಿಯ 7:26). ಯೇಸುವಿನ ಸಾಧು ಸ್ವಭಾವವೂ ದೀನತೆಯೂ (2 ಕೊರಿಂಥ 10:1) ಸರಿಯಾಗಿ ಯೋಚಿಸುವ ಎಲ್ಲಾ ಜನರಿಗೆ ಆತನನ್ನು ಪ್ರಿಯಕರನನ್ನಾಗಿ ಮಾಡಿತು.

ಅಂಥ ವ್ಯಕ್ತಿಯು ನಿಷ್ಕಾರಣವಾದ ದ್ವೇಷಕ್ಕೆ ಬಲಿಯಾದದ್ದು ಎಷ್ಟು ವಿಚಿತ್ರವಾದದ್ದಾ ಗಿದೆಯಲ್ಲವೇ! ಹಾಗಿದ್ದರೂ, ಅಂಥ ಅನಿರೀಕ್ಷಿತವಾದ ಮತ್ತು ಕೆಟ್ಟುಹೋದ ಪರಿಸ್ಥಿತಿಯು ಆತನ ಬಗ್ಗೆ ಮುಂತಿಳಿಸಲ್ಪಟ್ಟಿತು: "ಆದರೆ ಈಗ ಅವರು ನೋಡಿದ್ದಾರೆ, ಆದರೂ ನನ್ನ ಮೇಲೆಯೂ ನನ್ನ ತಂದೆಯ ಮೇಲೆಯೂ ದ್ವೇಷ ಮಾಡಿದ್ದಾರೆ. ಅವರು ನನ್ನನ್ನು ನಿಷ್ಕಾರಣವಾಗಿ ದ್ವೇಷಿಸಿದರು ಎಂದು ಅವರ ಧರ್ಮಶಾಸ್ತ್ರದಲ್ಲಿ ಬರೆದಿರುವ ಮಾತು

ನೆರವೇರುವಂತೆ ಹೀಗಾಯಿತು" (ಯೋಹಾನ 15:24, 25).

ಆತನ ಸೌಂದರ್ಯವಲ್ಲದೇ, ಪರಿಶುದ್ಧತೆಯ ಸೌಂದರ್ಯದೊಂದಿಗೆ ಧರಿಸಿದವನಾಗಿ, ಆತನ ಅದ್ಭುತಕಾರ್ಯಗಳ ಅರ್ಹತೆಗಳಿವೆ ("ಬೇರೆ ಯಾರೂ ಮಾಡದಿದ್ದ"; ಯೋಹಾನ 15:24). ಇವು ಆತನ ದೈವತ್ವದ ಅತೀ ಸಂದೇಹಾಸ್ಪದವಾಗಿ ವಿಮರ್ಶಿಸುವವರಿಗೆ ದೃಢಪಡಿಸಲು ಸಾಕಾಗುವಷ್ಟು ಪುರಾವೆಯಾಗಿದೆ. ಹೀಗಿದ್ದರೂ ಕೆಲವರಿಗೆ ನಂಬಿಕೆ ಯಾಗುವದಿಲ್ಲ; ಮತ್ತು ತಮ್ಮ ಮೆಸ್ಸೀಯನನ್ನು ತಿರಸ್ಕರಿಸುವದಕ್ಕಾಗಿ, "ತಮ್ಮ ಪಾಪಕ್ಕಾಗಿ ಯಾವುದೇ ನೆವದೊಂದಿಗೆ" ಉಳಿಯಲ್ಪಡಲಿಲ್ಲ (ಯೋಹಾನ 15:22). ಆತನ ಪ್ರೀತಿಯು ದ್ವೇಷದೊಂದಿಗೆ ಪ್ರತಿಯಾಗಿ ಕೊಡಲ್ಪಟ್ಟಿತು.

## ದೀನತೆಯ ಅರಸನು (ಜೆಕರ್ಯ 9:9)

ದೇವರು ಇಸ್ರಾಯೇಲಿನ ಅರಸರುಗಳಿಗೆ ತಮಗಾಗಿ ಕುದುರೆಗಳನ್ನು ದ್ವಿಗುಣಿತಗೊಳಿಸಬಾರದೆಂದು ಆಜ್ಞಾಪಿಸಿದ್ದನು (ಧರ್ಮೋಪದೇಶಕಾಂಡ 17:16), ಸೊಲೊಮೋನನು ತನ್ನ ವ್ಯರ್ಥತ್ವದಲ್ಲಿ ಹಾಗೂ ಮಾನವ ಬಲದ ಮೇಲಿನ ಅವಲಂಭನೆಯಲ್ಲಿ, ದೇವರ ಮಾತನ್ನು ಮೀರಿದನು (1 ಅರಸು 4:26). ಮೆಸ್ಸೀಯನನ್ನು ಕುರಿತು, ಜೆಕರ್ಯನು ಹೆಚ್ಚು ದೀನತೆಯ ಸವಾರಿಯನ್ನು ಮುಂತಿಳಿಸಿದನು:

> ಚೀಯೋನ್ ನಗರವೇ, ಬಹು ಸಂತೋಷಪಡು!
> ಯೆರೂಸಲೇಮ್ ಪುರಿಯೇ, ಹರ್ಷ ಧ್ವನಿಗೈ!
> ನೋಡು, ನಿನ್ನ ಅರಸು ನಿನ್ನ ಬಳಿಗೆ ಬರುತ್ತಾನೆ;
> ಆತನು ನ್ಯಾಯವಂತನು, ಸುರಕ್ಷಿತನು;
> ಶಾಂತಿಗುಣವುಳ್ಳನಾಗಿಯು ಕತ್ತೆಯನ್ನು, ಹೌದು ಪ್ರಾಯದ
> ಕತ್ತೆ ಮರಿಯನ್ನು ಹತ್ತಿದವನಾಗಿಯೂ ಬರುತ್ತಾನೆ.
> ನಾನು ಎಫ್ರಾಯೀಮಿನ ರಥ ಬಲವನ್ನೂ
> ಯೆರೂಸಲೇಮಿನ ಅಶ್ವಬಲವನ್ನೂ ನಿಶ್ಶೇಷ ಮಾಡುವೆನು;
> ಯುದ್ಧದ ಬಿಲ್ಲು ಇಲ್ಲವಾಗುವುದು;
> ಆತನು ಕೊಡುವ ಅಪ್ಪಣೆಯು ಜನಾಂಗಗಳಿಗೆ ಸಮಾಧಾನಕರವಾಗಿರುವುದು;
> ಆತನ ಆಳಿಕೆಯು ಸಮುದ್ರದಿಂದ ಸಮುದ್ರದವರೆಗೂ ಯೂಫ್ರೇಟಿಸ್ ನದಿಯಿಂದ
> ಭೂಮಿಯ ಕಟ್ಟಕಡೆಯ ವರೆಗೂ ಹರಡಿಕೊಂಡಿರುವುದು (ಜೆಕರ್ಯ 9:9, 10).

ಪ್ರವಾದಿಯು ಬರೆಯುವ ಸಮಯದಲ್ಲಿ (ಕ್ರಿ.ಪೂ. 520) ಯೆಹೂದಕ್ಕೆ ಯಾವುದೇ ಅರಸನು ಇಲ್ಲದ್ದು ಮತ್ತು ಯೇಸುವನ್ನು ಬಿಟ್ಟು ಅಂದಿನಿಂದ ಯಾರೂ ಇಲ್ಲದ್ದು ಜೆಕರ್ಯನ ಮುಂತಿಳಿಸುವಿಕೆಯಲ್ಲಿ ಇನ್ನೂ ಹೆಚ್ಚಾದದ್ದಾಗಿದೆ. ಪ್ರವಾದಿಯ ಮಾತುಗಳು ಯೇಸುವಿನ ನರವೇರುವಿಕೆಯಲ್ಲಿ ವಿವರವು ಬೆರಗುಗೊಳಿಸುವಂಥದ್ದಾಗಿದೆ:

> ... ಯೇಸು ಇಬ್ಬರು ಶಿಷ್ಯರನ್ನು ಕರೆದು "ನಿಮ್ಮೆದುರಿಗಿರುವ ಹಳ್ಳಿಗೆ ಹೋಗಿರಿ; ಹೋದಕೂಡಲೇ ಅಲ್ಲಿ ಕಟ್ಟಿರುವ ಕತ್ತೆಯನ್ನೂ ಅದರ ಕೂಡ ಇರುವ ಮರಿಯನ್ನೂ ಕಾಣುವಿರಿ; ಅವುಗಳನ್ನು ಬಿಚ್ಚಿ ನನ್ನ ಹತ್ತರಕ್ಕೆ ಹಿಡುಕೊಂಡುಬನ್ನಿರಿ. ಯಾವನಾದರೂ ನಿಮಗೆ ಏನಾದರೂ ಹೇಳಿದರೆ, 'ಇವು ಕರ್ತನಿಗೆ ಬೇಕಾಗಿವೆ' ಅನ್ನಿರಿ; ಕೂಡಲೇ ಅವುಗಳನ್ನು ಬಿಟ್ಟುಕೊಡುವನು" ಎಂದು ಹೇಳಿ ಕಳುಹಿಸಿದನು. ಒಬ್ಬ ಪ್ರವಾದಿಯ ಮುಖಾಂತರ ಹೇಳಿದ ಮಾತು ನೆರವೇರುವಂತೆ ಇದು ಆಯಿತು;

ಆ ಮಾತು ಏನಂದರೆ:

“ಚೀಯೋನ್ ನಗರಿಗೆ,
‘ನೋಡು, ನಿನ್ನ ಅರಸು ನಿನ್ನ ಬಳಿಗೆ ಬರುತ್ತಾನೆ;
ಆತನು ಶಾಂತಗುಣವುಳ್ಳವನಾಗಿಯೂ ಕತ್ತೆಯನ್ನು, ಹೌದು ಪ್ರಾಯದ ಕತ್ತೆ ಮರಿಯನ್ನು ಹತ್ತಿದವನಾಗಿಯೂ ಬರುತ್ತಾನೆಂದು ಹೇಳಿರಿ ಎಂಬದು.’ ”

ಆಗ ಶಿಷ್ಯರು ಹೋಗಿ ಯೇಸು ತಮಗೆ ಅಪ್ಪಣೆ ಕೊಟ್ಟಂತೆಯೇ ಕತ್ತೆಯನ್ನೂ ಮರಿಯನ್ನೂ ತಂದು ಅವುಗಳ ಮೇಲೆ ತಮ್ಮ ಬಟ್ಟೆಗಳನ್ನು ಹಾಕಲು ಆತನು ಹತ್ತಿ ಕೂತುಕೊಂಡನು. ಆಗ ಜನರಗುಂಪಿನಲ್ಲಿ ಬಹಳ ಮಂದಿ ತಮ್ಮ ಬಟ್ಟೆಗಳನ್ನು ದಾರಿಯಲ್ಲಿ ಹಾಸಿದರು; ಬೇರೆ ಕೆಲವರು ಮರಗಳಿಂದ ಚಿಗುರುಗಳನ್ನು ಕೊಯಿದು ದಾರಿಯಲ್ಲಿ ಹರಡುತ್ತಿದ್ದರು (ಮತ್ತಾಯ 21:1-8).

## ಯೆಹೂದನಲ್ಲಿ ರಾಜತ್ವ (ಆದಿಕಾಂಡ 49:10)

ಸುಮಾರು ಕ್ರಿ.ಪೂ. 1644ರಲ್ಲಿ ಪಿತೃವಾದ ಯಾಕೋಬನು ಗೋಷನ್ ಸೀಮೆಯಲ್ಲಿ ತನ್ನ ಮರಣದ ಹಾಸಿಗೆಯಲ್ಲಿ ಕುಳಿತು ಕೊಂಡಿದ್ದನು ಹಾಗೂ ತನ್ನ ಮಕ್ಕಳ ಮೇಲೆ ಆಶೀರ್ವಚನಗಳನ್ನು ಹೇಳಿದನು. ಯೆಹೂದನನ್ನು ಕುರಿತು ಯಾಕೋಬನ ಮುಖಾಂತರ ಪರಿಶುದ್ಧಾತ್ಮನು ಹೀಗೆ ಮುಂತಿಳಿಸಿದನು,

> ರಾಜದಂಡವನ್ನು ಹಿಡಿಯ ತಕ್ಕವನು ಬರುವತನಕ ಆ ದಂಡವು ಯೆಹೂದನ ಕೈಯಿಂದ ತಪ್ಪುವದಿಲ್ಲ. ಮುದ್ರೆಕೋಲು ಅವನ ಪಾದಗಳ ಬಳಿಯಿಂದ ಕದಲುವದಿಲ್ಲ; ಅವನಿಗೆ ಅನ್ಯಜನಗಳೂ ವಿಧೇಯರಾಗುವರು (ಆದಿಕಾಂಡ 49:10).

ಮುಂತಿಳಿಸುವಿಕೆಯು ಧೈರ್ಯವುಳ್ಳದ್ದೂ ಅಸಾಮಾನ್ಯವಾದದ್ದೂ ಆಗಿತ್ತು. ಯೆಹೂದನು ಚೊಚ್ಚಲು ಮಗನಾಗಿರಲಿಲ್ಲ (ಆದಿಕಾಂಡ 49:3), ಹಾಗೂ ಆತನು ಚೊಚ್ಚಲು ತನದ ಹಕ್ಕನ್ನು ಹೊಂದಿರಲಿಲ್ಲ (1 ಪೂರ್ವಕಾಲವೃತ್ತಾಂತ 5:1). ಹಾಗಿದ್ದರೂ, ಯೆಹೂದನು, ಕೆಟ್ಟ ಪ್ರಾರಂಭದ ನಂತರ ಬಲವನ್ನೂ ಸ್ವಾರ್ಥರಹಿತ ಪ್ರೀತಿಯನ್ನೂ ತೋರಿಸಿದನು, ಮತ್ತು “ಎಲ್ಲಾ ಸಹೋದರರಲ್ಲಿ ಪ್ರಬಲನಾಗಿದ್ದನು” (1 ಪೂರ್ವಕಾಲವೃತ್ತಾಂತ 5:2). ಭವಿಷ್ಯವನ್ನು ನೋಡುವದರಲ್ಲಿ, ಇಸ್ರಾಯೇಲಿನ ನಾಯಕನು, ಅರಸನು, ಯೆಹೂದನಿಂದ ಬರುವನೆಂದು ದೇವರು ತೀರ್ಮಾನಿಸಿದನು. ಅಂತಿಮವಾಗಿ, ಮಹಾ ಅರಸನು, ಮೆಸ್ಸೀಯನು ಯೆಹೂದನಿಂದ ಬರುವನು (ಇಬ್ರಿಯ 7:14).

ಯೆಹೂದನ ವಂಶದಲ್ಲಿ ಯಾವನಾದರೂ ರಾಜದಂಡವನ್ನು, ಆಡಳಿತೆಗಾರನ ಕೋಲನ್ನು ಹಿಡಿಯುವ ಮೊದಲು ಸುಮಾರು ಆರುನೂರು ವರ್ಷಗಳು ದಾಟಿ ಹೋಗುವವು. ಆಗ ಯೆಹೂದನ ವಂಶಜನಾದ ದಾವೀದನು ದಕ್ಷಣ ರಾಜ್ಯದಲ್ಲಿ ಮತ್ತು ಅನಂತರದಲ್ಲಿ (ಸುಮಾರು ಕ್ರಿ.ಪೂ. 1010ರಲ್ಲಿ) ಉತ್ತರ ರಾಜ್ಯದ ಮೇಲೆಯೂ ಸಹ ಅರಸನಂತೆ ಅಭಿಷೇಕಿಸಲ್ಪಡುವನು.

ಯೆಹೂದನಿಂದ ಕಾರ್ಯನಿರತ ಅರಸುತನವನ್ನು ತೆಗೆದು ಹಾಕಲು ಪಾಪವು ದೇವರಿಗೆ ಕಾರಣವಾಯಿತು. ದೇವರು ತನಗೆ ಸಾಧ್ಯವಾದಷ್ಟನ್ನು ಸಹಿಸಿದನು, 590ರಲ್ಲಿ ಆತನು ಚಿದ್ಕಿಯನಿಗೆ ಹೀಗೆ ಹೇಳಿದನು,

ಇಸ್ರಾಯೇಲಿನ ದೊರೆಯೇ, ದುಷ್ಟನೇ, ಭ್ರಷ್ಟನೇ!
ನಿನಗೆ ಸಮಯವು ಹತ್ತಿರವಾಗಿದೆ, ಇದೇ ನಿನ್ನ ಅಪರಾಧದ ಕಡೆಗಾಲ.
ಕರ್ತನಾದ ಯೆಹೋವನು ಇಂತೆನ್ನುತ್ತಾನೆ,
ಮುಂಡಾಸವನ್ನು ಕಿತ್ತುಬಿಡು; ಕಿರೀಟವನ್ನು ಎತ್ತಿಹಾಕು!
ಎಲ್ಲವೂ ವ್ಯತ್ಯಸ್ತವಾಗಲಿ;
ಕೆಳಗಿನದನ್ನು ಮೇಲೆ ಮಾಡು, ಮೇಲಿನದನ್ನು ಕೆಳಗೆ ಮಾಡು;
ನಾನು ದೊಬ್ಬಿ ಬಿಡುವೆನು, ದೊಬ್ಬಿ ಬಿಡುವೆನು, ದೊಬ್ಬಿ ಬಿಡುವೆನು;
ರಾಜ್ಯಕ್ಕೆ ಬಾಧ್ಯನು ಬರುವದರೊಳಗೆ ಒಂದೂ ಇದ್ದಂತೆ ಇರುವದಿಲ್ಲ;
ಅವನಿಗೇ ರಾಜ್ಯವನ್ನು ವಹಿಸುವೆನು (ಯೆಹೆಜ್ಕೇಲ 21:25-27).

ನಾಲ್ಕು ವರ್ಷಗಳ ನಂತರ ಯೆಹೆಜ್ಕೇಲನ ಮುಖಾಂತರದ ದೇವರ ಪ್ರವಾದನೆಯು ನೆರವೇರಿತು. ಆಗ ಆತನು ಯೂದಾಯದಲ್ಲಿ ಆಳುತ್ತಿದ್ದ ಕೊನೆಯ ಅರಸ, ಚಿದ್ಕೀಯನನ್ನು ಅನ್ಯನಾದ ನೆಬುಕದ್ನೆಚ್ಚರನ್ನು ಸೆರೆಯಾಗಿ ಒಯ್ಯಲು ಬಿಟ್ಟನು (2 ಅರಸು 25:1-7).

ಬಹಳಷ್ಟು ಪಾಪವು ಬೆಳದಿತ್ತು. ಯೆಹೂದನ ಸಂತತಿಯವರಲ್ಲಿ ಅರಸೊತ್ತಿಗೆಯು ಸಂಪೂರ್ಣವಾಗಿ ನಿಂತು ಹೋಗುವಂತೆ ದೇವರು ಆಜ್ಞಾಪಿಸಿದನು. ವಿಶೇಷವಾಗಿ ಚಿದ್ಕೀಯನ ಸೋದರಳಿಯ ಯೆಕೋನ್ಯನ ಬಗ್ಗೆ ದೇವರು ಹೀಗೆ ಹೇಳಿದನು:

ಇವನನ್ನು ಮಕ್ಕಳಿಲ್ಲದವನು, ವ್ಯರ್ಥಜನ್ಮದವನು ಎಂದು ಪಟ್ಟಿಯಲ್ಲಿ ಬರೆಯಿರಿ; ಇವನ ಸಂತಾನದಲ್ಲಿ ಇನ್ನು ಮೇಲೆ ಯಾವನೂ ದಾವೀದನ ಸಿಂಹಾಸನದಲ್ಲಿ ಕೂತು ಯೆಹೂದವನ್ನು ಆಳಬಾರನು (ಯೆರೆಮೀಯ 22:30).

ಯೆಕೊನ್ಯನು ಎಂದೆಂದಿಗೂ ಮಕ್ಕಳಿಲ್ಲದವನಾಗಿದ್ದನು. ಅಂದರೆ ಯುದಾಯದಲ್ಲಿ ಅರಸನಂತೆ ಆಳಲು ಉತ್ತರಾಧಿಕಾರಿ ಎಂದೂ ಇರಲೇ ಇಲ್ಲ. ಆದಾಗ್ಯೂ, ಒಂದು ಸಾವಿರ ವರ್ಷಗಳಿಗಿಂತ ಮೊದಲು ಯುದಾಯದಲ್ಲಿ ಶಿಲೋವನು ಬರುವವರೆಗೆ, ವಿಶ್ರಾಂತಿಯ ಮನುಷ್ಯನು, ಭದ್ರತೆಯನ್ನು ಹೊತ್ತುಕೊಳ್ಳುವಾತನು ಬರುವವರೆಗೆ ರಾಜ ದಂಡವು ಉಳಿಯುವದೆಂದು ದೇವರ ವಾಗ್ದಾನವು ಯೆಹೂದಕ್ಕೆ ಇತ್ತು. ಯೆಕೋನ್ಯನು ದೈಹಿಕ ವಾಗಿ ಮಕ್ಕಳಿಲ್ಲದವನಾಗಿರಲಿಲ್ಲ (ಮತ್ತಾಯ 1:12), ಆದರೆ ಅವನ ವಂಶಜರಲ್ಲಿ ಯಾರೂ ಅಕ್ಷರಶಃ ವಾಗಿ ಮತ್ತು ದೈಹಿಕವಾಗಿ ಅರಸರಾಗಲಿಲ್ಲ. ರಾಜದಂಡವು ಉಳಿಸಲ್ಪಟ್ಟಿತ್ತು ಆದರೆ ಅದು ಚಿದ್ಕೀಯನಿಂದ ಶಿಲೋವನಾಗಿದ್ದ, ವಿಶ್ರಾಂತಿಯ ಮನುಷ್ಯನಾಗಿದ್ದ, ಭದ್ರತೆಯವಾಹಕನಾದ ಯೇಸುವಿನ ವರೆಗೆ ಉಪಯೋಗಿಸಲ್ಪಡಲಿಲ್ಲ.

ಯೇಸು ತನ್ನ ಮೊದಲನೆಯ ಆಗಮದಲ್ಲಿ ಪ್ರಾಪಂಚಿಕ ಯೂದಾಯದ ಮೇಲೆ ಅರಸನಾಗಿದ್ದರೆ, ಇಲ್ಲವೇ ತನ್ನ ಎರಡನೆಯ ಬರೋಣದಲ್ಲಿ ಯೆರೂಸಲೇಮಿನಲ್ಲಿ ಪ್ರಾಪಂಚಿಕ ಅರಸನಾದರೆ, ಆಗ ಯೆರೆಮೀಯನ ಮುಖಾಂತರವಾದ ದೇವರ ಹಳೇ ಒಡಂಬಡಿಕೆಯ ಮುಂತಿಳಿಸುವಿಕೆಯು ಬಿದ್ದುಹೋಗುತ್ತಿತ್ತು. ಪಂಚಾಶತ್ತಮ ದಿನದಂದು (ಮೇ 28, ಕ್ರಿ.ಶ. 30) ಯೇಸುವು ಆತ್ಮಿಕ ಅರಸನಾದಾಗ ಹಾಗೂ ಪರಲೋಕದಲ್ಲಿ ದೇವರ ಬಲಗೆಡೆಯಲ್ಲಿ ಆಳಿಕೆ ನಡಿಸಲು ಪ್ರಾಂಭಿಸಿದಾಗ ಯಾಕೋಬನ ಹದಿನಾರುನೂರು ವರ್ಷಗಳ ಹಿಂದಿನ ಮುಂತಿಳಿಸುವಿಕೆಯು ನೆರವೇರಿತು:

ರಾಜದಂಡವನ್ನು ಹಿಡಿಯತಕ್ಕವನು ಬರುವ ತನಕ ಆ ದಂಡವು ಯೆಹೂದನ ಕೈಯಿಂದ ತಪ್ಪುವದಿಲ್ಲ. ಮುದ್ರೆಕೋಲು ಅವನ ಪಾದಗಳ ಬಳಿಯಿಂದ ಕದಲುವದಿಲ್ಲ;

ಅವನಿಗೆ ಅನ್ಯಜನಗಳೂ ವಿಧೇಯರಾಗಿರುವರು (ಆದಿಕಾಂಡ 49:10).

## ಕೊಂಬೆ (ಯೆರೆಮೀಯ 23:5)

ಸಸ್ಯಶಾಸ್ತ್ರದಲ್ಲಿ ಉಪಯೋಗಿಸಿದ ಮಾತನ್ನು ತನ್ನ ಕುಮಾರನನ್ನು ವಿವರಿಸಲಿಕ್ಕೆ ಒಂದು ದೃಷ್ಟಾಂತವಾಗಿ ದೇವರು ಆಯ್ಕೆ ಮಾಡಿದನು. ಅದು *Tsemah,*[2] "ಕೊಂಬೆ" ಎಂಬುದು. ಯೇಸುವು ಇಷಯನ ಮತ್ತು ದಾವೀದನ ವಂಶಾವಳಿಯ ಅಂಕುರ ಅಥವಾ ಕೊಂಬೆ ಯಾಗಿದ್ದಾನೆ (ಯೆಶಾಯ 11:1). ದೈಹಿಕ ಸೌಂದರ್ಯಕ್ಕೆ ಸಂಬಂಧಿಸಿ, ಒಣ ನೆಲದೊಳಗೆ ಬೇರಿನಿಂದ ಹೊರಡುವ ಅಂಕುರದಂತೆಯೂ ಬುಡದಿಂದ ಒಡೆಯುವ ಚಿಗುರಿನಂತೆಯೂ ಇದ್ದನು (ಯೆಶಾಯ 53:2). ಆತ್ಮಿಕವಾಗಿ, ಕೊಂಬೆ ಇಲ್ಲವೇ ಅಂಕುರ ಇಲ್ಲವೇ ಚಿಗುರು ಇಲ್ಲವೇ ಬುಡ ಎಂದು ಕರೆಯಲ್ಪಟ್ಟರೂ (ಜೆಕರ್ಯ 6:12) ಬಹಳ ಆಕರ್ಷಣೆಯುಳ್ಳವನಾಗಿದ್ದನು. ಆತನ ಅಂದವು ಪರಿಶುದ್ಧತೆಯ ಅಂದವೂ ಮಾನವ ಮಕ್ಕಳಿಗಿಂತ ಹೆಚ್ಚು ಸುಂದರವಾಗಿತ್ತು (ಕೀರ್ತನೆ 45:2). ಆತನ ಮಹಿಮೆಯು ತಂದೆಯ ಅದ್ವಿತೀಯವಾದ ಕುಮಾರನಿಗಿದ್ದಂಥದ್ದು ಆಗಿತ್ತು, ಕೃಪೆಯಿಂದಲೂ ಸತ್ಯದಿಂದಲೂ ತುಂಬಿದವನಾಗಿದ್ದನು (ಯೋಹಾನ 1:14). ಆತನು ಕರ್ತನ ಆಲಯವನ್ನು (ಜೆಕರ್ಯ 6:13), ಸಭೆಯನ್ನು ಕಟ್ಟುವನು ಮತ್ತು ಅರಸನಂತೆ ಆಳುವನು. ಈ ಅರಸನು ನ್ಯಾಯವನ್ನೂ ನೀತಿಯನ್ನೂ ನಡಿಸುತ್ತ ಜಾಣತನದಿಂದ ಆಳುವನು (ಯೆರೆಮೀಯ 23:5).

*Tsemah* ಕೊಂಬೆಯು ತನ್ನ ಆತ್ಮಿಕ ಸಿಂಹಾಸನದ ಮೇಲೆ ಕುಳಿತುಕೊಂಡು ಆಳುವ ನಲ್ಲದೇ, ಆತನು ತನ್ನ ಸಿಂಹಾಸನದ ಮೇಲಿರುವಾಗ ಯಾಜಕನಂತೆ ಸೇವೆ ಮಾಡುವನು. ವಂಶಾವಳಿಯಿಂದ ಆತನು ಯಾಜಕತನಕ್ಕೆ ಅರ್ಹನಾಗಿರುವದಿಲ್ಲ. ಆತನ ಮೂಲ ಪಿತೃವಾದ ದಾವೀದನ ಮುಖಾಂತರ, ಯೆಹೂದ ಗೋತ್ರದ ಕೊಂಬೆ ಯಾಗಿದ್ದನು. "ಈ ಕುಲದ ವಿಷಯದಲ್ಲಿ ಮೋಶೆಯು ಯಾಜಕರ ಸಂಬಂಧವಾಗಿ ಒಂದು ಮಾತನ್ನಾದರೂ ಹೇಳಲಿಲ್ಲ" (ಇಬ್ರಿಯ 7:14). ಆದುದರಿಂದ, ದೈಹಿಕವಾಗಿಯೂ ಅಕ್ಷರಶಃವಾ ಗಿಯೂ ಆತನೆಂದೂ ಯಾಜಕನಾಗಿರಲಾರನು. ಆತನು ಭೂಲೋಕಕ್ಕೆ ಹಿಂದಿರುಗಿ ಬರುವದಾದರೆ "ಯಾಜಕನಾಗಿ ಇರುವುದೇ ಇಲ್ಲ" (ಇಬ್ರಿಯ 8:4).

ಆತನ ಯಾಜಕತ್ವವು ಆತ್ಮಿಕವಾದದ್ದೂ ಪರಲೋಕದ್ದೂ ಆಗಿರುವಂತೆ, ಆತನ ಆಳಿಕೆಯು ಆತ್ಮಿಕವಾದದ್ದೂ ಪರಲೋಕದ್ದೂ ಆಗಿರುವುದು. ಪರಲೋಕದೊಳಗೆ ಪ್ರವೇಶಿಸಿ, ಪರಲೋಕಗಳಲ್ಲಿ ಮಹೋನ್ನತನ ಸಿಂಹಾಸನದ ಬಲಗಡೆಯಲ್ಲಿ ಆಸೀನನಾಗಿರುವ ಮಹಾ ಯಾಜಕನು ನಮಗಿದ್ದಾನೆ (ಇಬ್ರಿಯ 8:1). ಕೊಂಬೆಯು, ಮಹಾಯಾಜಕ ಮತ್ತು ಅರಸನಂತೆ ಇನ್ನು ಮುಂದೆ ಶರೀರವಾಗಿರುವದಿಲ್ಲ ಮತ್ತು ಪುನಃ ಇನ್ನೆಂದೂ ಆತನು ಹಾಗಿರುವದಿಲ್ಲ (2 ಕೊರಿಂಥ 5:16). ತನ್ನ ಸ್ವಂತದವರಿಗಾಗಿ ಆತನು ಹಿಂದಿರುಗಿ ಬರುವಾಗ ಆತನು ಪುನಃ ಶರೀರವಾಗುವದಿಲ್ಲ ಇಲ್ಲವೇ ಈ ಭೂಮಿಯ ಮೇಲೆ ತನ್ನ ಪಾದವನ್ನು ಇಡುವದಿಲ್ಲ. ಅದರ ಬದಲು, ತನ್ನ ಮಹಿಮೆಯುಳ್ಳ ದೇಹದಂತೆ ಮಾಡಲ್ಪಟ್ಟ, ಎಬ್ಬಿಸಲ್ಪಟ್ಟ ಹಾಗೂ ಬದಲಾಯಿಸಲ್ಪಟ್ಟ ಮತ್ತು ನಾಶವಾಗದಂಥ ದೇಹಗಳನ್ನು ಆಕಾಶದಲ್ಲಿ ತನ್ನನ್ನು ಸಂದರ್ಶಿಸಲು ಒಂದು ಗೂಡಿಸುವನು (1 ಕೊರಿಂಥ 15:51, 52; ಫಿಲಿಪ್ಪಿ 3:20, 21; 1 ಥೆಸಲೊನೀಕ 4:16-18). *Tsemah,* ಕೊಂಬೆಯ ಬಗ್ಗೆ ಮಹಿಮೆಯುಳ್ಳ ಸಂಗತಿಗಳು ಹೇಳಲ್ಪಟ್ಟಿವೆ.

## ದೇವರಂತೆ ಕಿರೀಟ ಹೊಂದಿದ್ದು (ಕೀರ್ತನೆ 45:6, 7)

"ಮನುಷ್ಯನನ್ನು" ಗುರುತಿಸಲಿಕ್ಕೆ ಉಪಯೋಗಿಸಿದ ಕೆಲವು ಹಿಬ್ರೂ ಪದಗಳು ಅವನ ಭೂಲೋಕದ (ಹಿಬ್ರೂ: *'adam*), ದುರ್ಬಲವಾದ (ಹಿಬ್ರೂ: *'enosh*) ಸ್ವಭಾವವನ್ನು ತೋರಿಸುತ್ತವೆ. ಬೇರೆಯವುಗಳು "ಮನುಷ್ಯನಿಗೆ" ಗಂಡನಂತೆ (ಹಿಬ್ರೂ: *'ish*), ಬಲದ ಜೀವಿಯಂತೆ (ಹಿಬ್ರೂ: *gibbor*) ಇಲ್ಲವೇ ದೇವರ ಸ್ವರೂಪದ ಪಾಲುಗಾರನಂತೆ (ಹಿಬ್ರೂ: *'elohim*) ತೋರಿಸುತ್ತವೆ. "ನೀವು ದೇವರುಗಳು (ಹಿಬ್ರೂ: *'elohim*) ಮತ್ತು ನೀವೆಲ್ಲರೂ ಮಹೋನ್ನತನ ಮಕ್ಕಳು" (ಕೀರ್ತನೆ 82:6) ಎಂದು ದೇವರು ಹೇಳಿದಾಗ ಆತನು ಮಾನವನ ಪರಲೋಕದ ಸ್ವಭಾವದ ಬಗ್ಗೆ ಮಾತಾಡುತ್ತಿದ್ದನು. ಹೀಗೆ "ದೇವರು" ಎಂದು ಭಾಷಾಂತರಿಸಲ್ಪಟ್ಟ ಪದವು (ಹಿಬ್ರೂ: *'elohim*) ಮಾನವ ಜೀವಿಗಳನ್ನು ವಿವರಿಸಲೂ ಉಪಯೋಗಿಸಲ್ಪಟ್ಟಿದೆ. ಇಂಗ್ಲೀಷ್ ಭಾಷಾಂತರವು ("gods") ಅನೇಕ ದೇವತ್ವಗಳಿವೆ ಎಂಬ ತಪ್ಪಾದ ಪ್ರಭಾವವನ್ನು ಬೀರಬಹುದು. ಹಾಗಿದ್ದರೂ, ಒಬ್ಬನೇ ಒಬ್ಬ ನಿಜವಾದ ದೇವರು ಇದ್ದಾನೆ ಎಂಬುದು ಬೈಬಲಿನ ಸ್ಪಷ್ಟವಾದ ಬೋಧನೆಯಾಗಿದೆ (ಧರ್ಮೋಪದೇಶ ಕಾಂಡ 6:4; ಯೆಶಾಯ 44:6; 1 ಕೊರಿಂಥ 8:2, 3). ಇದು ಸತ್ಯವಾಗಿರುವಾಗ, ಮಾನವರನ್ನೂ ದೇವರನ್ನೂ ವರ್ಣಿಸಲು ಒಂದೇ ರೀತಿಯ ಪದವನ್ನು ಕೀರ್ತನೆಗಾರನು ಉಪಯೋಗಿಸಿದ್ದು ಮಾನವ ಪ್ರಾಣದ ಪಾರಲೌಕಿಕ ಸ್ವಭಾವಕ್ಕೆ ಉಲ್ಲೇಖದಂತಿದೆ ಎಂದು ತೆಗೆದು ಕೊಳ್ಳಲ್ಪಡತಕ್ಕದ್ದು. ಯಾವುದೇ ಪ್ರಾಣಿಯು *'elohim* ("ದೇವರು") ಎಂಬಂತೆ ಸಂಬಂಧಿಸಿ ಹೇಳಲ್ಪಟ್ಟಿಲ್ಲ, ಆದರೆ ಮನುಷ್ಯನು ಹೇಳಲ್ಪಟ್ಟಿದ್ದಾನೆ.

ಈ ಎರಡು ಅರ್ಥದಲ್ಲಿ *'elohim* ("ದೇವರು" ಮತ್ತು "ದೇವರ ಸ್ವರೂಪದಲ್ಲಿ ಮನುಷ್ಯನು") ಪದವು ಸ್ಪಷ್ಟವಾದ ಉಪಯೋಗವು ಕೀರ್ತನೆ 45:6, 7ನ್ನು ಅರ್ಥಮಾಡಿಕೊಳ್ಳಲಿಕ್ಕೆ ನಮಗೆ ಸಹಾಯ ಮಾಡುತ್ತದೆ:

> ದೇವರೇ, ನಿನ್ನ ಸಿಂಹಾಸನವು ಯುಗ ಯುಗಾಂತರಗಳಲ್ಲಿಯೂ ಇರುವುದು;
> ನಿನ್ನ ರಾಜದಂಡವು ನ್ಯಾಯಸ್ಥಾಪಕವಾದದ್ದೇ, ನೀನು ನೀತಿಯನ್ನು ಪ್ರೀತಿಸಿದಿ;
> ಅನೀತಿಯನ್ನು ದ್ವೇಷಿಸಿದಿ;
> ಆದುದರಿಂದ ದೇವರು, ನಿನ್ನ ದೇವರೇ, ನಿನ್ನನ್ನು ನಿನ್ನ ಜೊತೆಗಾರರಿಗಿಂತ ಉನ್ನತಸ್ಥಾನಕ್ಕೆ ಏರಿಸಿ ಪರಮಾನಂದ ತೈಲದಿಂದ ಅಭಿಷೇಕಿಸಿದ್ದಾನೆ.

ಮೂಲದಲ್ಲಿ ಸೊಲೊಮೋನನ ವಿವಾಹಗಳಲ್ಲಿ ಒಂದಕ್ಕೆ ಸಂಬಂಧಿಸಿರುವಂತೆ ಕೀರ್ತನೆ 45 ಚೆನ್ನಾಗಿ ವಿವರಿಸಲ್ಪಟ್ಟಿದೆ. ಉನ್ನತಕ್ಕೇರಿಸಲ್ಪಟ್ಟಂತೆ ಹೊಸ ಗಂಡನಿಗೆ ವಚನ 6 ಮತ್ತು 7 ಗೌರವ ಸಲ್ಲಿಸುವಂಥವುಗಳಾಗಿವೆ: ಆತನು ನೀತಿವಂತ ಅರಸನು ಮತ್ತು ಆತನು ದೇವರಾಗಿದ್ದಾನೆ (ಅಂದರೆ ದೇವರ ಸ್ವರೂಪನಾಗಿದ್ದಾನೆ).

ಹೀಗಿದ್ದರೂ, ಕೀರ್ತನೆ 45:6, 7ಕ್ಕೆ "ಸೊಲೊಮೋನನಿಗಿಂತ ಹೆಚ್ಚು ದೊಡ್ಡವನಾದಾತನಲ್ಲಿ" ನೆರವೇರಿಕೆಯಿದೆ (ಮತ್ತಾಯ 12:42). "ಗುರುವಿಗಿಂತ ಶಿಷ್ಯನು ದೊಡ್ಡವನಲ್ಲ, ದಣಿಗಿಂತ ಆಳು ದೊಡ್ಡವನಲ್ಲ" (ಮತ್ತಾಯ 10:24). ಸೊಲೊಮೋನನ ಮಗನು ಆತನ ಪೂರ್ವಜನಿಗಿಂತ ಹೆಚ್ಚು ದೊಡ್ಡವನು. ಪಂಚಾಶತ್ತಮ ದಿನದಂದು, ಕ್ರಿ.ಶ. 30 ಪರಲೋಕದಲ್ಲಿ ದೇವರ ಬಲಗಡೆಯಲ್ಲಿ - ಯೇಸು ಕ್ರಿಸ್ತನು ಪರಲೋಕದ ಮತ್ತು ಭೂಲೋಕದ ಅರಸನಾಗಿ ಮಾಡಲ್ಪಟ್ಟನು (ಎಫೆಸ 1:22, 23; ಮತ್ತಾಯ 28:18). ಆತನ ಪಟ್ಟಾಭಿಷೇಕದ ದಿನ, ತಂದೆಯಾದ ದೇವರು ಸೊಲೊಮೋನನಿಗೆ ಮೊದಲು ಅನ್ವಯಿಸಿದ ಭಾಷೆಯನ್ನು ಮೆಚ್ಚಿಕೊಂಡನು ಮತ್ತು ಉನ್ನತಕ್ಕೇರಿಸಿದನು:

> ಕುಮಾರನ ವಿಷಯದಲ್ಲಿ ಯಾದರೋ [ದೇವರು] ಹೀಗೆ ಹೇಳುತ್ತಾನೆ,
> “ದೇವರೇ, ನಿನ್ನ ಸಿಂಹಾಸನವು ಯುಗಯುಗಾಂತರಗಳಲ್ಲಿಯೂ ಇರುವುದು;
> ನ್ಯಾಯದಂಡನೇ, ನಿನ್ನ ರಾಜದಂಡವಾಗಿದೆ; ನೀನು ನೀತಿಯನ್ನು ಪ್ರೀತಿಸಿದಿ,
> ಅನೀತಿಯನ್ನು ದ್ವೇಷಿಸಿದಿ;
> ಆದುದರಿಂದ ದೇವರು, ನಿನ್ನ ದೇವರೇ, ನಿನ್ನನ್ನು ನಿನ್ನ ಜೊತೆಗಾರರಿಗಿಂತ ಉನ್ನತ
> ಸ್ಥಾನಕ್ಕೆ ಏರಿಸಿ ಪರಮಾನಂದ ತೈಲದಿಂದ ಅಭಿಷೇಕಿಸಿದ್ದಾನೆ”
> (ಇಬ್ರಿಯ 1:8, 9).

ಸೊಲೊಮೋನನ ಆಳಿಕೆಯನ್ನು ಮತ್ತು ಯೇಸುವಿನ ಆಳಿಕೆಯನ್ನು ವಿವರಿಸಲಿಕ್ಕೆ “ನೀತಿ” ಎಂಬ ಅದೇ ಪದವನ್ನು ದೇವರು ಉಪಯೋಗಿಸಿದನು; ಆದರೆ ಯೇಸುವಿಗೆ ಅನ್ವಯಿಸಿದಾಗ ಹೆಚ್ಚು ಉನ್ನತವಾದ ಮತ್ತು ಹೆಚ್ಚು ಮಹಿಮೆಗೇರಿಸಲ್ಪಟ್ಟ ಅರ್ಥವನ್ನೊಳಗೊಂಡಿತ್ತು. ಅದರಂತೆಯೇ, ಸೊಲೊಮೋನನ ವ್ಯಕ್ತಿಯನ್ನು ವಿವರಿಸಲು ಅದೇ “ದೇವರು” ಎಂಬ ಪದವನ್ನು ಉಪಯೋಗಿಸಿದ್ದಾನೆ (ಅಂದರೆ ಸೊಲೊಮೋನನಲ್ಲಿ ದೇವರ ಸ್ವರೂಪ), ಯೇಸುವಿನ ಸ್ವಭಾವವನ್ನು (ಅಂದರೆ, ದೈವತ್ವವನ್ನೂ) ವಿವರಿಸಲಿಕ್ಕೆ ಉಪಯೋಗಿಸಲಾಗಿದೆ, ಆದರೆ ಸೊಲೊಮೋನನಿಗೆ ಅನ್ವಯಿಸಿದ್ದಾಗಿನಕ್ಕಿಂತ ಯೇಸುವಿಗೆ ಅನ್ವಯಿಸಿದಾಗ ಬಹಳವಾಗಿ ಹೆಚ್ಚಿನ ಅರ್ಥಕೊಟ್ಟಿತು.

---

ಟಿಪ್ಪಣಿಗಳು

[1]ಮೆಸ್ಸೀಯನ ಜನನ ಮತ್ತು ಜೀವನವನ್ನು ಕುರಿತು ಹೆಚ್ಚಿನ ಹಳೇ ಒಡಂಬಡಿಕೆಯ ಪ್ರವಾದನೆಗಳು “ಬೈಬಲಿನ ಬಗ್ಗೆ ಕಲಿತು ಕೊಳ್ಳುವುದು” ಎಂಬ ಪುಸ್ತಕದಲ್ಲಿ ಈ ಪ್ರವಾದನೆಗಳು ಕ್ರಿಸ್ತನಲ್ಲಿ ನೆರವೇರಿದವೆಂದು ತೋರಿಸಲ್ಪಟ್ಟಿವೆ: “ದಾವೀದನ ಕುಮಾರ” (2 ಸಮುವೇಲ 7:12), “ಬೇತ್ಲೆಹೇಮಿನವನು” (ಮೀಕ 5:2), “ಐಗುಪ್ತದಿಂದ ಹೊರಗೆ ಕರೆಯಲ್ಪಟ್ಟವನು” (ಹೋಶೇಯ 11:1).
[2]“ಅಂಕುರ” ಎಂಬುದಕ್ಕಾಗಿ ಇತರ ಸಸ್ಯಶಾಸ್ತ್ರದ ಮಾತುಗಳು ಉಪಯೋಗಿಸಲ್ಪಟ್ಟಿವೆ *hofer* and *netser* (ಯೆಶಾಯ 11:1) ಮತ್ತು *yonek* (ಯೆಶಾಯ 53:2) ಎಂಬವುಗಳು ಒಳಗೊಂಡಿವೆ.

© 2009 Truth for Today